ದೆಹಲಿ ಕರ್ನಾಟಕ ಸಂಘದ

# ಅಭಿಮತ

ಆಗಸ್ಟ್ 2021
ಬೆಲೆ ರೂ. 1



## 75ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು



## ನೂತನ ಮುಖ್ಯಮಂತ್ರಿ

ಬಸವರಾಜ ಬೊಮ್ಮಾಯಿ
ಅವರಿಗೆ ಅಭಿನಂದನೆಗಳು



ನೂತನ ಕೇಂದ್ರ ಹೊಸ ನವೀಕರಿಸಬಹುದಾದ ಶಕ್ತಿ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಸನ್ಮಾನ್ಯ ಭಗವಂತ ಖೂಬಾ ಅವರನ್ನು ಈಚೆಗೆ ದೆಹಲಿ ಕರ್ನಾಟಕ ಸಂಘದಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಜಂಟಿ ಕಾರ್ಯದರ್ಶಿ ರಾಧಾಕೃಷ್ಣ, ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್, ಶಿವಪ್ಪ ಎಂ., ಸಂತೋಷ ಜೆ., ಶ್ರೀಮತಿ ಸುಮಿತಾ ಮುರಗೋಡ ಹಾಗೂ ಆಜೀವ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ಉಪಸ್ಥಿತರಿದ್ದರು.




ನೂತನ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಸನ್ಮಾನ್ಯ ಶೋಭಾ ಕರಂದ್ಲಾಜೆ ಅವರನ್ನು ಈಚೆಗೆ ದೆಹಲಿ ಕರ್ನಾಟಕ ಸಂಘದಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಜಂಟಿ ಕಾರ್ಯದರ್ಶಿ ರಾಧಾಕೃಷ್ಣ, ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್, ಶಿವಪ್ಪ ಎಂ., ಸಂತೋಷ ಜೆ., ಶ್ರೀಮತಿ ಸುಮಿತಾ ಮುರಗೋಡ ಹಾಗೂ ಆಜೀವ ಸದಸ್ಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್, ಟಿ.ಪಿ. ಬೆಳ್ಳಿಯಪ್ಪ ಉಪಸ್ಥಿತರಿದ್ದರು.

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳ ಸದಸ್ಯರು
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಅನಂತರಾಮು ಅರಳ
ಡಿ.ವಿ.ಎಸ್. ಮೂರ್ತಿ
ಈಶ್ವರ ಮಡಿವಾಳ



## ಸಂಪಾದಕೀಯ

# ಮನ್ನಣೆ ವಂಚಿತ ಸ್ವಾತಂತ್ರ್ಯ ಹೋರಾಟಗಾರರು

ನಮ್ಮ ದೇಶ ಈ ಬಾರಿ ಸ್ವಾತಂತ್ರ್ಯೋತ್ಸವದ 75ನೇ ವರ್ಷಾಚರಣೆಯನ್ನು ಆಚರಿಸುತ್ತಿದೆ. ಬ್ರಿಟಿಷರ ದಬ್ಬಾಳಿಕೆಯಿಂದ ಮುಕ್ತಿ ಪಡೆದ ದಿನದ ಅಂಗವಾಗಿ ಭಾರತೀಯರು ಸಂಭ್ರಮಿಸುವ ಈ ಅಮೃತ ಮಹೋತ್ಸವಕ್ಕಾಗಿ ದೇಶದಾದ್ಯಂತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಸ್ವಾತಂತ್ರ್ಯೋತ್ಸವದ ದಿನದಂದು ನಾವು ಮುಖ್ಯವಾಗಿ ದೇಶಕ್ಕಾಗಿ ಹೋರಾಟ ಮಾಡಿ ತ್ಯಾಗ, ಬಲಿದಾನ ಮಾಡಿ ಅಮರರಾದ ಮಹನೀಯರನ್ನು ಸ್ಮರಿಸುತ್ತೇವೆ. ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರೂ, ಸರ್ದಾರ ವಲ್ಲಭಭಾಯಿ ಪಟೇಲ್, ಸುಭಾಸ್‌ಚಂದ್ರ ಬೋಸ್, ಭಗತ್ ಸಿಂಗ್, ಝಾನ್ಸಿ ಲಕ್ಷ್ಮೀಬಾಯಿ, ಕರ್ನಾಟಕದ ಅಬ್ಬಕ್ಕದೇವಿ, ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಕರ್ನಾಡ್ ಸದಾಶಿವ ರಾವ್, ಹರ್ಡೇಕರ್ ಮಂಜಪ್ಪ ಹಾಗೂ ಇನ್ನೂ ಅನೇಕ ಮಹನೀಯರನ್ನು ನಾವು ಪ್ರತೀ ಬಾರಿ ಸ್ವಾತಂತ್ರ್ಯೋತ್ಸವದ ದಿನದಂದು ಸ್ಮರಿಸುತ್ತೇವೆ. ಈ ಮಹನೀಯರು ಸದಾ ಸ್ಮರಣೀಯರು ಎಂಬುದು ನಿಜವಾದರೂ, ಈ ಎಲ್ಲಾ ನಾಯಕರಿಗೆ ಹೆಗಲಿಗೆ ಹೆಗಲು ಕೊಟ್ಟು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವ್ಯಕ್ತಿಗಳ ಸಂಖ್ಯೆ ಅಸಂಖ್ಯಾತ. ಅವರೆಲ್ಲರನ್ನೂ ನಾವಿಂದು ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ನೆನೆಯಲೇ ಬೇಕು.

ದೇಶಕ್ಕಾಗಿ ತಮ್ಮ ಜೀವಿತವನ್ನು ಕಳೆದು ಅರ್ಪಣಾ ಭಾವದಿಂದ ಹೋರಾಡಿದ ಈ ನಾಯಕರನ್ನು 'ಮನ್ನಣೆ ವಂಚಿತ ಸ್ವಾತಂತ್ರ್ಯ ಹೋರಾಟಗಾರರು' ಎನ್ನಬಹುದು. ಕರ್ನಾಟಕದಲ್ಲಿ ಈ ರೀತಿ ಎಲೆಮರೆ ಕಾಯಿಯಂತೆ ಅನೇಕ ಮಹನೀಯರು ಸಂಗ್ರಾಮದಲ್ಲಿ ಪಾಲ್ಗೊಂಡಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವಲ್ಲಿ ಪ್ರಸಿದ್ಧಿ ಪಡೆದ ನಾಯಕರಂತೆ ಇವರ ಪಾತ್ರವೂ ಬಹಳ ಮುಖ್ಯವಾಗಿದೆ.

ಉಪ್ಪಿನ ಸತ್ಯಾಗ್ರಹದಲ್ಲಿ ಸ್ವಯಂ ಸೇವಕರ ದಂಡನ್ನು ಬೆಳಗಾವಿಯಿಂದ ಅಂಕೋಲಕ್ಕೆ ಕರೆತಂದ ಕೆ.ಜಿ. ಗೋಖಲೆ, ತೆರಿಗೆ ಪದ್ಧತಿ ವಿರುದ್ಧ ಸಿಡಿದೆದ್ದ ಆರ್.ಎಸ್. ಹುಕ್ಕೇರಿಕರ್ ಮೊದಲಾದವರ ಕುರಿತು ಇತಿಹಾಸದ ಪುಟಗಳಲ್ಲಿ ಹೆಚ್ಚಿನ ಮಾಹಿತಿ ಇಲ್ಲ. ಮಹಿಳೆಯರಲ್ಲೂ ಧೈರ್ಯ ಮತ್ತು ತ್ಯಾಗಕ್ಕೆ ಹೆಸರಾದ ಬಳ್ಳಾರಿಯ ಸಿದ್ದಮ್ಮ, ಕರಾವಳಿಯ ಉಮಾಬಾಯಿ ಕುಂದಾಪುರ, ಬೆಂಗಳೂರಿನ ಯಶೋಧರ ದಾಸಪ್ಪ ಮೊದಲಾದವರ ಪ್ರಸಿದ್ಧಿಗೆ ಬಾರದ ಹೋರಾಟದ ಕಥನಗಳನ್ನು ಇಂದು ಬರೆಯಬೇಕಾದ ಮತ್ತು ಸ್ಮರಿಸಬೇಕಾದ ಅಗತ್ಯವಿದೆ.


ಕೆ.ಜಿ. ಗೋಖಲೆ


ಬಳ್ಳಾರಿ ಸಿದ್ದಮ್ಮ

ಅಮರ ಸುಳ್ಯದ ಸ್ವಾತಂತ್ರ್ಯ ಹೋರಾಟವನ್ನು ಭಾರತದ ಸ್ವಾತಂತ್ರ್ಯ ಚಳುವಳಿಯ ಮೊದಲ ದಂಗೆ ಎಂದು ಕನ್ನಡಿಗರು ತಿಳಿದುಕೊಂಡಿದ್ದಾರೆ. ಆದರೆ ಇದು ಕರ್ನಾಟಕದ ಆಚೆಗೆ ತಿಳಿದಿಲ್ಲ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು ಬರೆಯುವಾಗ ಈ ಅಧ್ಯಾಯಕ್ಕೆ ಹೆಚ್ಚಿನ ಮಹತ್ವ ದೊರೆಯಬೇಕು. ಇಲ್ಲಿ ಹೋರಾಡಿದ ವ್ಯಕ್ತಿಗಳು ಕೂಡಾ ಬೆಳಕಿಗೆ ಬಾರದ ಅನೇಕ ಸ್ವಾತಂತ್ರ್ಯ ಹೋರಾಟಗಾರರ ಸಾಲಿಗೆ ಸೇರಿ ಹೋಗಿದ್ದಾರೆ. ಇವರೆಲ್ಲರನ್ನೂ ಮುಂದಿನ ದಿನಗಳಲ್ಲಿ ನಾವು ಮರೆಯದೆ ಸ್ಮರಿಸೋಣ. ಏಕೆಂದರೆ ದೇಶದ ಇಂದಿನ ಪ್ರಗತಿ ಮತ್ತು ಜನರ ಕಲ್ಯಾಣದ ಹಿಂದೆ ಮನ್ನಣೆ ವಂಚಿತ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗದ ಕತೆಯಿದೆ.

ನಿಮಗೆಲ್ಲರಿಗೂ 75ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಹಾರ್ದಿಕ ಶುಭಾಶಯಗಳು.

ಡಾ. ಅವನೀಂದ್ರನಾಥ್ ರಾವ್

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 31 ಸಂಚಿಕೆ 11
ಆಗಸ್ಟ್ 2021, ಬೆಲೆ ರೂ. 1

## ನಮ್ಮನಮ್ಮೊಳಗೆ

# ಸ್ವಾತಂತ್ರ್ಯೋತ್ಸವದ ಆಶಯಗಳು

ಕರ್ನಾಟಕದ ನೂತನ ಮುಖ್ಯಮಂತ್ರಿಗಳಾಗಿ ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿಯವರು ಅಧಿಕಾರವಹಿಸಿಕೊಂಡಿದ್ದಾರೆ. ಅವರಿಗೆ ಮತ್ತು ಎಲ್ಲ ಹೊಸ ಮಂತ್ರಿಗಳಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಶುಭಾಶಯಗಳು.

ಕರ್ನಾಟಕದ ಮಾಜಿ ಮುಖ್ಯಮಂತ್ರಿ ತಮ್ಮ ತಂದೆ ದಿವಂಗತ ಶ್ರೀ ಎಸ್.ಆರ್. ಬೊಮ್ಮಾಯಿಯವರ ಹಾದಿಯಲ್ಲಿ ಶ್ರೀ ಬಸವರಾಜ ಬೊಮ್ಮಾಯಿಯವರು ಸಾಗಿ ಬಂದಿದ್ದಾರೆ. ಶ್ರೀ ಎಸ್.ಆರ್. ಬೊಮ್ಮಾಯಿಯವರನ್ನು ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಸಂಘಕ್ಕೆ ನಾನು ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ಬರಮಾಡಿಕೊಳ್ಳುವ ಸೌಭಾಗ್ಯ ನನ್ನದಾಗಿತ್ತು. ಈಗ ಬಸವರಾಜ ಬೊಮ್ಮಾಯಿಯವರೂ ಸಹ ನಮ್ಮ ಸಂಘಕ್ಕೆ ಬೇಗ ಭೇಟಿ ನೀಡಲಿ ಎಂಬುದು ನಮ್ಮೆಲ್ಲರ ಮತ್ತು ದೆಹಲಿ ಕನ್ನಡಿಗರ ಹಾರೈಕೆ.

ಕರ್ನಾಟಕವನ್ನು ಎಲ್ಲ ರೀತಿಯಲ್ಲೂ ಅವರು ಮುನ್ನಡೆಸಲಿ ಎಂದು ನಾವೆಲ್ಲ ಹಾರೈಸೋಣ. ಕೊರೊನಾದ ಮೂರನೇಯ ಅಲೆಯ ಬರುವಿಕೆಯ ಹಿನ್ನಲೆಯಲ್ಲಿ ಅವರೆಲ್ಲರ ಜವಾಬ್ದಾರಿ ಇನ್ನೂ ಹೆಚ್ಚಿದೆ. ಈಗಾಗಲೆ ಮಾನ್ಯ ಮುಖ್ಯಮಂತ್ರಿಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿರುವುದು ಶ್ಲಾಘನೀಯ. ಈ ಹೊಸ ಸರಕಾರದಿಂದ ನಮಗೆಲ್ಲ ಇನ್ನೂ ಹೊಸ ಆಶಯಗಳು. ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಅದರಲ್ಲೂ ಹೊರನಾಡ ಕನ್ನಡಿಗರಿಗೆ ಇನ್ನೂ ಹೆಚ್ಚು ಈ ಸರಕಾರದಿಂದ ಬೆಂಬಲ ಸಿಗಲಿ ಎಂದು ನಾವೆಲ್ಲ ಹಾರೈಸೋಣ.

ಕರ್ನಾಟಕದಲ್ಲಿ ಕೊರೊನಾದ ಹಾವಳಿಯ ಜೊತೆಗೆ ಇತ್ತೀಚೆಗೆ ಮಳೆರಾಯನ ಅಬ್ಬರವೂ ಕೂಡ ಸಾಕಷ್ಟು ತೊಂದರೆಗಳನ್ನು ಉಂಟು ಮಾಡಿದೆ. ಕರಾವಳಿ ಮತ್ತು ಮಲೆನಾಡಿನ ಜಿಲ್ಲೆಗಳಲ್ಲಿ ನೆರೆಹಾವಳಿಯ ಜೊತೆಗೆ ಭೂಕುಸಿತ ದೊಡ್ಡ ಪ್ರಮಾಣದಲ್ಲಿ ಸಂಭವಿಸಿರುವುದರಿಂದ ಸಾವಿರಾರು ಜನ ಮನೆಮಠ ಕಳೆದುಕೊಂಡಿದ್ದಾರೆ. ಇದರ ಜೊತೆಗೆ ಈಗ ಮತ್ತೆ ಕೊರೊನಾ ಸುಮಾರು ಕರ್ನಾಟಕದ ಎಂಟು ಜಿಲ್ಲೆಗಳಲ್ಲಿ ಮತ್ತೆ ತೀವ್ರವಾಗುತ್ತಿರುವ ಲಕ್ಷಣಗಳನ್ನು ನಾವು ಕಾಣುತ್ತಿದ್ದೇವೆ. ಇದು ಮೂರನೇಯ ಅಲೆಗೆ ಪೀಠಿಕೆಯೊ ಎಂಬುದು ಇನ್ನೂ ಖಚಿತವಾಗಿಲ್ಲ. ಬೆಂಗಳೂರಿನಲ್ಲಿಯೂ ಸಹ ಕೊರೊನಾದ ಹೆಚ್ಚಳವನ್ನು ನಾವು ಕಾಣುತ್ತಿದ್ದೇವೆ.

ಇತ್ತ ದೆಹಲಿಯಲ್ಲಿ ಕೊರೊನಾದ ಹಾವಳಿ ಇಂದಿನ ಸಂದರ್ಭದಲ್ಲಿ ನಿಯಂತ್ರಣದಲ್ಲಿದೆ. ನಮ್ಮ ಸ್ವಾತಂತ್ರೋತ್ಸವದ ಈ ಆಗಸ್ಟ್ ತಿಂಗಳು ಈ ಮೂರನೆಯ ಅಲೆಗೆ ನಾಂದಿ ಹಾಡುವುದೊ ಅಥವಾ ಈ ಅಲೆ ಇಲ್ಲಿಗೆ ತನ್ನ ಪಯಣವನ್ನು ನಿಲ್ಲಿಸುವುದೊ ಎಂಬುದನ್ನು ನಾವೆಲ್ಲ ಕಾದು ನೋಡಬೇಕಾಗಿದೆ. ಮುಂಬರುವ ದಿನಗಳಲ್ಲಿನ ಉತ್ತರಪ್ರದೇಶ ಮತ್ತು ಇತರ ಕೆಲ ರಾಜ್ಯಗಳ ಚುನಾವಣಾ ಪ್ರಚಾರಗಳ ಅಬ್ಬರ, ಹಬ್ಬಹರಿದಿನಗಳ ಸಾಲು ಮತ್ತು ಜನ ಸೋತು ಸುಣ್ಣಾಗಿ ಮಾರುಕಟ್ಟೆಗಳತ್ತ ಓಡುವ ಪರಿಯೆಲ್ಲವೂ ಸೇರಿ ಕೊರೊನಾದ ದಾರಿಯ ಹೆಬ್ಬಾಗಿಲನ್ನು ತೆರೆದಂತಾಗುವುದೊ ಎಂಬುದರ ಬಗ್ಗೆ ಸಾಕಷ್ಟು ಗುಲ್ಲೆದ್ದಿದೆ. ಎಚ್ಚರ;ಎಚ್ಚರ;ಎಚ್ಚರ...ಮುಖವಾಡ ಧರಿಸಿ, ಜನದಟ್ಟಣೆಯ ಪ್ರದೇಶಗಳಿಗೆ ಎಡತಾಕಬೇಡಿ ಎಂಬುದನ್ನು ನಾವು ಬಾರಿಬಾರಿ ನೆನೆಪು ಮಾಡಿಕೊಳ್ಳಬೇಕಾಗಿದೆ. ದೆಹಲಿ ಸರಕಾರ ಮಾರುಕಟ್ಟೆಗಳನ್ನು ತೆರೆಯಲು ಅನುಮತಿ ನೀಡಿದ್ದರೂ ಶಾಲಾಕಾಲೇಜುಗಳನ್ನು ಪ್ರಾರಂಭಿಸುವುದರ ಬಗ್ಗೆ ಇನ್ನೂ ಖಚಿತವಾದ ತನ್ನ ನಿರ್ಧಾರವನ್ನು ಪ್ರಕಟಿಸಿಲ್ಲ.

ಕೊರೊನಾ ಹುಟ್ಟುಹಾಕಿದ ಈ ಎಲ್ಲ ಅನಿಶ್ಚಿತತೆಗಳ ಕಾರಣದಿಂದಾಗಿ ಮತ್ತು ಸರಕಾರದ ಆದೇಶಗಳಿಂದಾಗಿ ದೆಹಲಿ ಕರ್ನಾಟಕ ಸಂಘದ ಚುನಾವಣೆಗಳ ಪ್ರಕ್ರಿಯೆಗಳು ಕೂಡಾ ಮುಂದೂಡಲ್ಪಟ್ಟಿವೆ. ಯಾವುದೆ ಬಗೆಯ ಸಾಮೂಹಿಕ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳನ್ನು ಈ ಸರಕಾರದ ಆದೇಶಾನುಸಾರ ಹಮ್ಮಿಕೊಳ್ಳುವಂತಿಲ್ಲ. ನೂರು ಜನ ಮದುವೆಗಳಿಗೆ ಮತ್ತು ಅಂತ್ಯಕ್ರಿಯೆಗಳಿಗೆ ಮಾತ್ರ ಹಾಜರಾಗಬಹುದಾಗಿದೆ. ಈ ನಿಯಮಾವಳಿಗಳಲ್ಲಿ ಬದಲಾವಣೆಯಾದಾಗ ಮಾತ್ರ ಚುನಾವಣಾಧಿಕಾರಿಗಳು ಸಂಘದ ಚುನಾವಣೆಯ ಪ್ರಕ್ರಿಯೆ ಬಗ್ಗೆ ಮುಂದುವರಿಯಬಹುದಾಗಿದೆ. ಅಲ್ಲಿಯ ತನಕ ಈಗಿನ ಕಾರ್ಯಕಾರಿ ಸಮಿತಿ ಉಸ್ತುವಾರಿ ಸಮಿತಿಯಾಗಿ, ಕಾವಲು ಸಮಿತಿಯ ನಿರ್ದೇಶನದಲ್ಲಿ ಮುಂದುವರೆಯುವುದು ಅನಿವಾರ್ಯವಾಗಿದೆ.

ಮುಂಬರುವ ದಿನಗಳಲ್ಲಿ ಕೊರೊನಾದ ಬರಲಿರುವ ಅಲೆಗಳ ಕಾರಣದಿಂದಾಗಿ ಸರಕಾರದ ನಿಯಮಾವಳಿಗಳಲ್ಲಿ ಬದಲಾವಣೆ ಸಾಧ್ಯವಾಗದಿದ್ದರೆ ಚುನಾವಣಾಧಿಕಾರಿಗಳ ಜೊತೆಗೆ ಕಾವಲು ಮತ್ತು ಕಾರ್ಯಕಾರಿ ಸಮಿತಿಗಳು ಕುಳಿತು, ಸಂಘದ ನಿಯಮಾವಳಿಗಳನ್ನು ಗಮನದಲ್ಲಿರಿಸಿಕೊಂಡು ಮುಂಬರುವ ಕಾರ್ಯಕ್ರಮಗಳ ಆಯೋಜನೆಗಳ ಕುರಿತಾಗಿ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಿದೆ. ಕೊರೊನಾದ ಹಾವಳಿ ಮತ್ತು ಸರಕಾರ ಅದನ್ನು ನಿಯಂತ್ರಣದಲ್ಲಿರಿಸಲು ತರುತ್ತಿರುವ ನಿಯಮಾವಳಿಗಳು ಸಂಘದ ಚರಿತ್ರೆಯಲ್ಲಿ ಅದರ ನಿರಂತರ ಕಾರ್ಯಚಟುವಟಿಕೆಗಳಿಗೆ ಒಡ್ಡಿದ ಅತ್ಯಂತ ದೊಡ್ಡ ಸವಾಲಾಗಿದೆ. ಸಂಘದ ನಿಯಮಾವಳಿಗಳ ಎಡೆಯಲ್ಲಿರುವ ಎಲ್ಲ ಸಾಧ್ಯತೆಗಳನ್ನು ಉಪಯೋಗಿಸಿಕೊಂಡು ಮತ್ತು ಸಂಘದ ಪ್ರಜಾಸತ್ತಾತ್ಮಕ ಘನತೆಗೆ ಧಕ್ಕೆ ಬರದ ರೀತಿಯಲ್ಲಿ ನಾವು ಕಾರ್ಯನಿರ್ವಹಿಸುವುದಕ್ಕೆ ಕಟಿಬದ್ಧರಾಗಿದ್ದೇವೆ.

ನಮ್ಮ ದೇಶ ತನ್ನ ಎಪ್ಪತ್ತೈದನೆಯ ಸ್ವಾತಂತ್ರ್ಯೋತ್ಸವದ ಆಚರಣೆಯ ಸಂಭ್ರಮದಲ್ಲಿದೆ. ದೆಹಲಿ ಕನ್ನಡಿಗರೆಲ್ಲರಿಗೂ ಈ ಸಂದರ್ಭದಲ್ಲಿ ಹಾರ್ದಿಕ ಶುಭಾಶಯಗಳು.

ಈ ಎಲ್ಲ ವರುಷಗಳಲ್ಲಿ ನಮ್ಮ ದೇಶ ಹಲವಾರು ರಂಗಗಳಲ್ಲಿ ಅಭಿವೃದ್ಧಿಯ ಯಶಸ್ಸನ್ನು ಕಂಡಿದೆ. ನಮ್ಮ ಜನಸಮುದಾಯ ತನ್ನ ಕನಸುಗಳ ಬದುಕನ್ನು ಕಟ್ಟಿಕೊಳ್ಳುವತ್ತ ನಿರತವಾಗಿದೆ. ಆದರೆ, ಕಳೆದ ಒಂದು ವರ್ಷಕ್ಕೂ ಮೀರಿ ನಮ್ಮನ್ನೆಲ್ಲ ತೀವ್ರವಾಗಿ ಕಾಡಿಸಿದ ಮತ್ತು ಇನ್ನೂ ಕಾಡಿಸುತ್ತಿರುವ ಕೊರೊನಾದ ಅಲೆಗಳು ಎಲ್ಲರನ್ನೂ ತಲ್ಲಣಗೊಳಿಸಿವೆ. ಬದುಕನ್ನು ಕಟ್ಟಿಕೊಳ್ಳುವ ಕೆಲಸ ದುಸ್ತರವಾಗುತ್ತಿದೆ. ಅದರಲ್ಲೂ ಬಡವರ ಪಾಲಿಗೆ ಇದು ಇನ್ನೂ ಕಷ್ಟಕರವಾದ ದಿನಗಳಾಗಿವೆ. ನಿರುದ್ಯೋಗದ ಸಮಸ್ಯೆ ದೇಶದ ಕೋಟಿಗಟ್ಟಲೆ ಜನರನ್ನು ಒಂದಲ್ಲ ಒಂದು ಬಗೆಯಲ್ಲಿ ಕಾಡುತ್ತಿದೆ.

ಈಗ ದೆಹಲಿಯಲ್ಲಿ ಕೊರೊನಾ ನಿಯಂತ್ರಣದಲ್ಲಿದ್ದಂತೆ ತೋರುತ್ತಿದೆ. ಆದರೂ, ನಾವು ಕಳೆದ ಕೆಲ ದಿನಗಳಲ್ಲಿ ಹಲವು ಆಪ್ತರನ್ನು ಕಳೆದುಕೊಂಡಿದ್ದೇವೆ. ಕೊರೊನಾದಿಂದ ಚೇತರಿಸಿಕೊಂಡರೂ ಅದು ಶರೀರದ ವಿವಿಧ ಅಂಗಗಳ ಮೇಲೆ ಮಾಡಿದ ಹಲ್ಲೆಗಳನ್ನು ನಿಭಾಯಿಸಿಕೊಳ್ಳಲಾಗದೆ ಅಗಲುತ್ತಿರುವವರ ಸಂಖ್ಯೆಯೂ ಹೆಚ್ಚುತ್ತಿದೆ. ಲಸಿಕೆಗಳನ್ನು ತೆಗೆದುಕೊಂಡು ಅದರ ಪ್ರಕೋಪವನ್ನು ಕಡಿಮೆ ಮಾಡಿಕೊಳ್ಳಬಹುದೆಂಬುದನ್ನು ಎಲ್ಲರೂ ಹೇಳುತ್ತಿದ್ದಾರೆ. ಸರಕಾರದ ಅಂಕಿಅಂಶಗಳ ಪ್ರಕಾರ ಸುಮಾರು 50 ಕೋಟಿಯಷ್ಟು ಜನರಿಗೆ ಲಸಿಕೆಯನ್ನು ನೀಡಲಾಗಿದೆ. ನಮ್ಮ ದೇಶದ ಜಟಿಲತೆಗಳನ್ನು ಗಮನಿಸಿಕೊಂಡಾಗ ಇದು ಒಂದು ಬಗೆಯಲ್ಲಿ ದೊಡ್ಡ ಸಾಧನೆಯೇ ಸರಿ. ಯುರೋಪಿನ ದೇಶಗಳ ಒಟ್ಟಾರೆ ಜನಸಂಖ್ಯೆಯು ಇಷ್ಟಿರಲಿಕ್ಕಿಲ್ಲ. ಲಸಿಕೆಗಳನ್ನು ನೀಡಲು ನಮ್ಮ ದೇಶದಲ್ಲಿರುವ ಸೌಕರ್ಯ ಮತ್ತು ಸವಲತ್ತುಗಳು ಚೆನ್ನಾಗಿಯೆ ಇವೆ. ಆದರೆ, ಕೊಡಲು ಲಸಿಕೆಗಳು ಬೇಕಷ್ಟೆ. ಈ ವರ್ಷದಂತ್ಯದ ತನಕ ಎಲ್ಲರಿಗೂ ಲಸಿಕೆಗಳನ್ನು ನೀಡುವ ಸರಕಾರದ ಘೋಷಣೆ ಸಾಕಾರವಾಗಬೇಕಾದರೆ ಅದರ ಸರಬರಾಜು ಕೂಡಾ ದುಪ್ಪಟ್ಟಿನಲ್ಲಿ ಸಿಗುವಂತಿರಬೇಕು. ಬಹುಶಃ ಮುಂಬರುವ ದಿನಗಳಲ್ಲಿ ಇದು ಸಾಧ್ಯವಾಗಲಿ ಮತ್ತು ದೇಶದ ಮೂಲೆಮೂಲೆಗಳಲ್ಲಿ ಎಲ್ಲರಿಗೂ ಲಸಿಕೆ ದೊರೆತು ಎಲ್ಲರ ಬಾಳು ಹಸನಾಗಲಿ ಎಂದು ನಾವೆಲ್ಲ ಆಶಿಸೋಣ.

*ಡಾ. ವೆಂಕಟಾಚಲ ಹೆಗಡೆ*
*ಅಧ್ಯಕ್ಷರು*

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ,

ಅಂತೂ ಇಂತೂ ರಾಜ್ಯದಲ್ಲಿ ಕರ್ನಾಟಕ ಸರ್ಕಾರದ ಸಂಪುಟ ಪುನರ್‌ರಚನೆಯಾಗಿದೆ. ಹೊಸ ಮುಖ್ಯಮಂತ್ರಿಗಳು ಶ್ರೀ ಬಸವರಾಜ ಬೊಮ್ಮಾಯಿ ಮತ್ತು ಅವರ ಸಂಪುಟಕ್ಕೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

ವಿಶೇಷವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಮಂತ್ರಿಗಳಾದ ಸನ್ಮಾನ್ಯ ವಿ. ಸುನೀಲ್ ಕುಮಾರ್ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ದೆಹಲಿ ಕರ್ನಾಟಕ ಸಂಘದ ಕಾರ್ಯ ಚಟುವಟಿಕೆಗಳು ಮುಂಬರುವ ದಿನಗಳಲ್ಲಿ ಆರಂಭ ಆಗಬೇಕಾಗಿದೆ. ದೆಹಲಿ ಸರ್ಕಾರ ಈಗಾಗಲೇ ಐವತ್ತು ಜನರಿಗೆ ಸೇರಲು ಅನುಮತಿ ನೀಡಿದೆ. ಸಾಂಸ್ಕೃತಿ ಕಾರ್ಯಕ್ರಮಗಳನ್ನು ಆಯೋಜಿಸಲು ಸರ್ಕಾರ ಬರುವ ದಿನಗಳಲ್ಲಿ ಅವಕಾಶ ಮಾಡಲಿದೆ.

ಅದಕ್ಕಿಂತ ಮೊದಲು ನೂರು ಜನರಿಗೆ ಅವಕಾಶ ಸಿಕ್ಕಿದ ತಕ್ಷಣವೇ ಸಂಘದ ಚುನಾವಣಾ ಪ್ರಕ್ರಿಯೆಯನ್ನು ಮುಗಿಸಿ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಲಿದ್ದೇವೆ. ಆದಷ್ಟು ಬೇಗನೆ ನಮ್ಮ ದೆಹಲಿ ಸರ್ಕಾರ ನೂರಕ್ಕಿಂತ ಹೆಚ್ಚು ಜನರು ಸೇರಲು ಅವಕಾಶ ಮಾಡಿಕೊಡಲಿ.


ಕೇಂದ್ರ ಸರ್ಕಾರದಲ್ಲಿ ಅತ್ಯುತ್ತಮವಾದ ಕೆಲಸ ಮಾಡಿರುವ ಐವತ್ತಕ್ಕಿಂತ ಹೆಚ್ಚು ಕ್ಯಾಬಿನೆಟ್‌ಗಳಲ್ಲಿ ಎರಡನೇ ಸ್ಥಾನಕ್ಕೆ ತಂದ ಮಾನ್ಯ ಕೇಂದ್ರ ಮಂತ್ರಿಗಳಾದ ಶ್ರೀ ಸದಾನಂದ ಗೌಡರನ್ನು ಕೇಂದ್ರ ಮಂತ್ರಿಮಂಡಲದಲ್ಲಿ ಸೇರಿಸದಿರುವುದು ದುರದೃಷ್ಟಕರ.

ಮಂತ್ರಿಗಳು ದೆಹಲಿ ಕರ್ನಾಟಕ ಸಂಘಕ್ಕೆ ಜೊತೆಯಾಗಿ ನಿಂತವರು. ದಿವಂಗತ ಶ್ರೀ ಅನಂತಕುಮಾರ್ ಅವರು ಮತ್ತು ಮಾನ್ಯ ಸದಾನಂದ ಗೌಡರ ಸೇವೆ ದೆಹಲಿ ಕರ್ನಾಟಕ ಸಂಘಕ್ಕೆ ಅಮೂಲ್ಯವಾದದ್ದು. ಅದನ್ನು ನಾವು ಎಂದೂ ಮರೆಯಲು ಸಾಧ್ಯವಿಲ್ಲ.

ಇತ್ತೀಚೆಗೆ ಕೇಂದ್ರ ಸಚಿವ ಸಂಪುಟಕ್ಕೆ ಹೊಸದಾಗಿ ಸೇರ್ಪಡೆಯಾದ ನಾಲ್ಕು ಕೇಂದ್ರ ರಾಜ್ಯ ಮಂತ್ರಿಗಳು ಕರ್ನಾಟಕದ ಹೆಸರಿನಲ್ಲಿ ಬಂದಿದ್ದಾರೆ. ಕನ್ನಡಿಗರಿಗೆ ಮತ್ತು ಕನ್ನಡ ಕಾರ್ಯಗಳಿಗೆ ಜೊತೆ ನಿಲ್ಲಲಿ ಎನ್ನುವ ಮನದ ಆಸೆ ನಮ್ಮದು.

***ಸಿ.ಎಂ. ನಾಗರಾಜ***
*ಪ್ರಧಾನ ಕಾರ್ಯದರ್ಶಿ*

## ಅಭಿನಂದನೆ



**ನೂತನ ಕೇಂದ್ರ ಸಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಸನ್ಮಾನ್ಯ ಎ. ನಾರಾಯಣ ಸ್ವಾಮಿ ಅವರನ್ನು ಈಚೆಗೆ ದೆಹಲಿ ಕರ್ನಾಟಕ ಸಂಘದಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಜಂಟಿ ಕಾರ್ಯದರ್ಶಿ ರಾಧಾಕೃಷ್ಣ, ಕಾರ್ಯಕಾರಿ ಸಮಿತಿ ಸದಸ್ಯ ಸಂತೋಷ ಜೆ ಮತ್ತು ಹಿರಿಯ ಕನ್ನಡಿಗ ವಿ.ವಿ. ಬಿರಾದಾರ ಅವರು ಉಪಸ್ಥಿತರಿದ್ದರು.**

# ಕರ್ನಾಟಕದ ನೂತನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ರಾಜೀನಾಮೆಯಿಂದ ತೆರವುಗೊಂಡಿದ್ದ ಮುಖ್ಯಮಂತ್ರಿಯ ಸ್ಥಾನಕ್ಕೆ ಹಾವೇರಿ ಜಿಲ್ಲೆಯ ಶಿಗ್ಗಾಂವ ಶಾಸಕ, ಮಾಜಿ ಗೃಹ ಸಚಿವ ಬಸವರಾಜ ಬೊಮ್ಮಾಯಿ ಆಯ್ಕೆಯಾಗಿದ್ದಾರೆ. ಅವರು ಕರ್ನಾಟಕದ 23ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

ಬಸವರಾಜ ಸೋಮಪ್ಪ ಬೊಮ್ಮಾಯಿ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್. ಆರ್. ಬೊಮ್ಮಾಯಿ ಮತ್ತು ಗಂಗಮ್ಮ ಅವರ ಪುತ್ರ. 1960 ರ ಜನವರಿ 28 ರಂದು ಜನಿಸಿದ ಬೊಮ್ಮಾಯಿ ಬಿ.ವಿ. ಬೊಮ್ಮರೆಡ್ಡಿ ಕಾಲೇಜ್ ಆಫ್ ಇಂಜಿನಿಯರಿಂಗ್ ನಿಂದ ಮೆಕಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಪದವಿ ಪಡೆದಿದ್ದರು. ಬೊಮ್ಮಾಯಿ ಮೂಲತಃ ವೃತ್ತಿಯಲ್ಲಿ ಕೃಷಿಕ ಮತ್ತು ಉದ್ಯಮಿ.

ನೀರಾವರಿ ಯೋಜನೆಗಳಲ್ಲಿ ಹಾಗೂ ನೀರಾವರಿ ವಿಷಯಗಳಲ್ಲಿ ಆಳವಾದ ಜ್ಞಾನ ಹೊಂದಿರುವ ಅವರು, ಹಾವೇರಿ ಜಿಲ್ಲೆಯ ಶಿಗ್ಗಾಂವ್‌ನಲ್ಲಿ ಭಾರತದಲ್ಲೇ ಮೊದಲ ಶೇ.100 ರಷ್ಟು ಕೊಳವೆ ನೀರಾವರಿ ಯೋಜನೆಯನ್ನು ಜಾರಿಗೆ ತರುವುದು ಸೇರಿದಂತೆ ನೀರಾವರಿ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದು ಜಲಸಂಪನ್ಮೂಲ ಸಚಿವರಾಗಿ ಅಪಾರ ಶ್ಲಾಘನೆಗೆ ಪಾತ್ರರಾಗಿದ್ದಾರೆ.

ಯಡಿಯೂರಪ್ಪ ಅವರ ಸಂಪುಟದಲ್ಲಿ ಮುಖ್ಯಮಂತ್ರಿಗಳ ಬಳಿಕ ಎರಡನೇ ಪ್ರಬಲ ಖಾತೆಯಾದ ಗೃಹ ಖಾತೆಯನ್ನೂ ನಿರ್ವಹಿಸಿ ಅನುಭವ ಹೊಂದಿರುವ ಬೊಮ್ಮಾಯಿ ಅವರು ತಮ್ಮ ರಾಜಕೀಯವನ್ನು ಪ್ರಾರಂಭಿಸಿದ್ದು ಜನತಾದಳದಿಂದ.

1998 ಹಾಗೂ 2004 ರಲ್ಲಿ ಧಾರವಾಡ ಸಂಘ ಸಂಸ್ಥೆಗಳ ಅಧಿಕಾರಿಗಳ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದರು. 2008 ರಲ್ಲಿ ಜನತಾದಳವನ್ನು ತೊರೆದು ಬಿಜೆಪಿ ಸೇರ್ಪಡೆಯಾಗಿದ್ದರು. 2008 ರ ವಿಧಾನಸಭಾ ಚುನಾವಣೆಯಲ್ಲಿ ಶಿಗ್ಗಾಂವ ಕ್ಷೇತ್ರದಿಂದ ಬಿಜೆಪಿ ಶಾಸಕರಾಗಿ ಬೊಮ್ಮಾಯಿ ಆಯ್ಕೆಗೊಂಡಿದ್ದರು. ಬೊಮ್ಮಾಯಿ ಅವರು ಈ ಕ್ಷೇತ್ರದಿಂದ ಈವರೆಗೂ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ವಿರೋಧಪಕ್ಷದ ಉಪನಾಯಕ, ಜೆ.ಹೆಚ್. ಪಟೇಲ್ ಸಿಎಂ ಆಗಿದ್ದ ಅವಧಿಯಲ್ಲಿ, ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ, ಕಾನೂನು ಮತ್ತು ಸಂಸದೀಯ ಸಚಿವರಾಗಿ, ಸಹಕಾರ ಸಚಿವರಾಗಿ ಕಾರ್ಯನಿರ್ವಹಣೆ ಮಾಡಿರುವ ಅನುಭವವನ್ನು ಬಸವರಾಜ ಬೊಮ್ಮಾಯಿ ಹೊಂದಿದ್ದಾರೆ. ಜನತಾದಳದಿಂದ



ಸೋಮಪ್ಪ ರಾಯಪ್ಪ ಬೊಮ್ಮಾಯಿ (ಎಸ್.ಆರ್. ಬೊಮ್ಮಾಯಿ) ಅವರು ಮುಖ್ಯಮಂತ್ರಿಯಾಗಿದ್ದ (1988-89) 32-33 ವರ್ಷಗಳ ನಂತರ ಅವರ ಪುತ್ರ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾರೆ.

ಕರ್ನಾಟಕದ ನೂತನ ಮುಖ್ಯಮಂತ್ರಿ ಸನ್ಮಾನ್ಯ ಬಸವರಾಜ ಬೊಮ್ಮಾಯಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.



# ಅಗಲಿದ 'ಅಭಿನಯ ಶಾರದೆ' ಜಯಂತಿ



ಅಭಿನಯ ಶಾರದೆ ಎಂದು ಅಭಿಮಾನಿಗಳಿಂದ ಕರೆಸಿಕೊಳ್ಳುತ್ತಿದ್ದ ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ನಟಿಸಿದ್ದ ಹಿರಿಯ ನಟಿ ಜಯಂತಿ ನಿಧನರಾಗಿದ್ದಾರೆ.

ಅವರು ಪುತ್ರ ಕೃಷ್ಣ ಹಾಗೂ ಅಪಾರ ಅಭಿಮಾನಿಗಳನ್ನು ಅಗಲಿದ್ದಾರೆ.

ಕನ್ನಡ ಸೇರಿದಂತೆ ದಕ್ಷಿಣ ಭಾರತ ಚಿತ್ರರಂಗದಲ್ಲಿ ನಟಿ ಜಯಂತಿಯವರ ಹೆಸರು ಚಿರಪರಿಚಿತ. ಕನ್ನಡದಲ್ಲಿಯೇ 190 ಚಿತ್ರಗಳಲ್ಲಿ ಅಭಿನಯಿಸಿದ್ದ ಜಯಂತಿಯವರು ತೆಲುಗು, ತಮಿಳು, ಮಲಯಾಳಂ, ಹಿಂದಿ ಮತ್ತು ಮರಾಠಿ ಸೇರಿದಂತೆ 500ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಕನ್ನಡದ ನಟ ಸಾರ್ವಭೌಮ ಡಾ. ರಾಜ್ ಕುಮಾರ್ ಅವರ ಜೊತೆ 45 ಚಿತ್ರಗಳಲ್ಲಿ ನಟಿಸಿದ ಹೆಗ್ಗಳಿಕೆ ಜಯಂತಿಯವರದ್ದು. ದಕ್ಷಿಣ ಭಾರತದ ಚಿತ್ರರಂಗದ ದಂತಕಥೆಗಳಾದ ಎಂಜಿಆರ್, ಎನ್ ಟಿಆರ್ ಅವರೊಂದಿಗೆ ಸಹ ನಟಿಸಿದ್ದರು.

1950ರಲ್ಲಿ ಬಳ್ಳಾರಿಯಲ್ಲಿ ಜನಿಸಿದ್ದ ಜಯಂತಿಯವರ ಮೂಲ ಹೆಸರು ಕಮಲಾ ಕುಮಾರಿ. ತಂದೆ ಬಾಲಸುಬ್ರಹ್ಮಣ್ಯಂ ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರೆ, ತಾಯಿ ಸಂತಾನಲಕ್ಷ್ಮಿ ಗೃಹಿಣಿ.

ಜಯಂತಿಯವರು ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ್ದು ವೈ.ಆರ್. ಪುಟ್ಟಸ್ವಾಮಿಯವರ 'ಜೇನುಗೂಡು' ಚಿತ್ರದ ಮೂಲಕ. ಅಲ್ಲಿಂದಲೇ ಕಮಲಾ ಕುಮಾರಿ ಜಯಂತಿಯಾಗಿದ್ದು.

ಕನ್ನಡ ಚಿತ್ರರಂಗದಲ್ಲೇ ಮೊದಲ ಬಾರಿಗೆ ಬಿಕಿನಿ ತೊಟ್ಟು ಸುದ್ದಿಯಾಗಿದ್ದ ನಟಿ ಜಯಂತಿಯವರು ತಾವು ನಿರ್ವಹಿಸುವ ಪಾತ್ರಕ್ಕೆ ನ್ಯಾಯ ಒದಗಿಸುತ್ತಿದ್ದರು, ಭಾವಪೂರ್ಣವಾಗಿ ಅಭಿನಯಿಸುತ್ತಿದ್ದರು.




'ನಾಗರಹಾವು' ಚಿತ್ರದಲ್ಲಿ ಒನಕೆ ಓಬವ್ವಳಾಗಿ ನಟಿ ಜಯಂತಿ

ಪುಟ್ಟಣ್ಣ ಕಣಗಾಲ್ ಅವರ ನಾಗರಹಾವು ಚಿತ್ರದ ಒಂದೇ ಒಂದು ಹಾಡಿನಲ್ಲಿ ಕಾಣಿಸಿಕೊಂಡು ಕನ್ನಡ ಚಿತ್ರರಂಗದಲ್ಲಿ ಇತಿಹಾಸ ಸೃಷ್ಟಿಸಿದರು. ಒನಕೆ ಓಬವ್ವನಾಗಿ ಜಯಂತಿಯವರ ಅಭಿನಯ ಇಂದಿಗೂ ಜನಪ್ರಿಯ.

ನಟಿ ಜಯಂತಿ ಆರು ಬಾರಿ ಅತ್ಯುತ್ತಮ ನಟಿ ಪ್ರಶಸ್ತಿಗೆ ಭಾಜನರಾಗಿದ್ದರು. ಎಡಕಲ್ಲು ಗುಡ್ಡದ ಮೇಲೆ, ಮನಸ್ಸಿನಂತೆ ಮಾಂಗಲ್ಯ, ಧರ್ಮ ದಾರಿ ತಪ್ಪಿತು, ಮಸಣದ ಹೂವು, ಆನಂದ್, ಟುವಿ ಟುವಿ ಟುವಿ ಚಿತ್ರಗಳಿಗೆ ಜಯಂತಿ ರಾಜ್ಯ ಪ್ರಶಸ್ತಿ ಪಡೆದಿದ್ದರು. '

ಅಗಲಿದ ಕನ್ನಡದ ಹಿರಿಯ ನಟಿ ಜಯಂತಿ ಅವರಿಗೆ ದೆಹಲಿ ಕನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

# 'ಕೊರೊನಾ ಶಾಲೆ' ಚಿತ್ರಕಲಾ ಸ್ಪರ್ಧೆ





ಸುಷ್ಮಾ ನಿಂಬಾಳ– ಪ್ರಥಮ ಬಹುಮಾನ

ಕೊರೊನಾ ನಂತರದ ಕಾಲದಲ್ಲಿ ವಿದ್ಯಾರ್ಥಿಗಳು ಅನಿವಾರ್ಯವಾಗಿ ಆನ್‌ಲೈನ್ ತರಗತಿಗಳಿಗೆ ಮೊರೆ ಹೋಗುತ್ತಿದ್ದಾರೆ. ಇದರಂತೆ ಗುರುಗಾಂವ್ ಕನ್ನಡ ಕಲಿಕಾ ಕೇಂದ್ರವೂ ಪ್ರತಿ ಭಾನುವಾರ ಆನ್‌ಲೈನ್ ಮೂಲಕ ಕನ್ನಡ ಕಲಿಕೆಯನ್ನು ನಿರಂತರವಾಗಿ ನಡೆಸುತ್ತಾ ಬರುತ್ತಿದೆ. ತರಗತಿಗಳಲ್ಲಿ ವಿದ್ಯಾರ್ಥಿಗಳನ್ನು ಕ್ರಿಯಾಶೀಲರನ್ನಾಗಿಸಲು ಕಲಿಕಾ ಕೇಂದ್ರದ ಶಿಕ್ಷಕರು ಅನೇಕ ಭಾಷಾ ಸಂಬಂಧಿತ ಚಟುವಟಿಕೆಗಳನ್ನು ಆಯೋಜಿಸಿರುತ್ತಾರೆ.

ಇತ್ತೀಚೆಗೆ ಶಾಲಾ ಪ್ರಪಂಚದಿಂದ ದೂರವಾದ ಮಕ್ಕಳ ಮನೋಭಾವನೆಯನ್ನು ಅಭಿವ್ಯಕ್ತಪಡಿಸಲು 'ಕೊರೊನಾ–ಶಾಲೆ' ಎನ್ನುವ ಪರಿಕಲ್ಪನೆಯಲ್ಲಿ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಹಲವಾರು ವಿದ್ಯಾರ್ಥಿಗಳು ಆಸಕ್ತಿಯಿಂದ ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಸುಷ್ಮಾ ನಿಂಬಾಳ ಪ್ರಥಮ ಬಹುಮಾನ, ಪ್ರಮೋದ್ ಕುಮಾರ್ ಎಂ. ದ್ವಿತೀಯ ಬಹುಮಾನ ಹಾಗೂ ಪೃಥ್ವಿರಾಜ್ ಕಟ್ಟೀಮನಿ ತೃತೀಯ ಬಹುಮಾನ ಪಡೆದಿರುತ್ತಾರೆ.

ದೆಹಲಿಯ ಖ್ಯಾತ ಕಲಾವಿದ ಶ್ರೀಕಾಂತ್ ಪೊದ್ದಾರ್ ಅವರು ಈ ಸ್ಪರ್ಧೆಯ ತೀರ್ಪುಗಾರರಾಗಿದ್ದರು. ಆದಷ್ಟು ಬೇಗ ಶಾಲೆಯ ಬಾಗಿಲು ಮಕ್ಕಳಿಗೆ ತೆರೆಯಲಿ ಎನ್ನುವ ಆಶಯದೊಂದಿಗೆ ವಿಜೇತರಿಗೆ ಹಾಗೂ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಗುರುಗಾಂವ್ ಕನ್ನಡ ಸಂಘದಿಂದ ಅಭಿನಂದಿಸಲಾಯಿತು.

***ಸಂತೋಷ ಜೆ.***




ಪ್ರಮೋದ್ ಕುಮಾರ್–ದ್ವಿತೀಯ ಬಹುಮಾನ




ಪೃಥ್ವಿರಾಜ್ ಕಟ್ಟೀಮನಿ–ತೃತೀಯ ಬಹುಮಾನ

## ರಾತ್ರಿ



ಬೆಳಕಿಲ್ಲದ ಕತ್ತಲೆಗೆ ರಾತ್ರಿ ಎಂಬರು ಸತ್ಯ
ಹಾಡಹಗಲೇ ಬೆಳಕ ಮುಚ್ಚಿ ಸುಳ್ಳಿನ
ಸರಪಣಿ ಹೆಣೆದು ಸತ್ಯದ ಕತ್ತು ಹಿಸುಕಿ
ಅಂಧಕಾರಕ್ಕೆ ದೂಕಿ ಅಟ್ಟಹಾಸಪಡುವರು

ಮಹಾನಗರಗಳಲ್ಲಿ ಹಗಲು ರಾತ್ರಿಯೇ ತಿಳಿಯದು
ಕಂಗೊಳಿಸುವ ಜಗಜಗಿಸುವ ಲೈಟುಗಳು
ಸೂರ್ಯ, ಚಂದ್ರ ನಕ್ಷತ್ರಗಳನೇ ಮರೆಸುವವು
ಹಗಲಿರುಳೆನ್ನದೆ ದೋಚುವ ಆಟ ನಡೆಯುತ್ತಲೇ ಇರುತ್ತದೆ.

ರಾತ್ರಿಯಾಯ್ತು ಮಲಗೋಣ ವಿಶ್ರಾಂತಿ ಪಡೆಯೋಣ
ಎಲ್ಲವೂ ಸಿನಿಮಾದ ಡೈಲಾಗುಗಳು ನಿಜ ಜೀವನ
ದಲ್ಲಿ ಆಯಾಸವೇ ಇಲ್ಲ ಪುರುಸೊತ್ತಿದ್ದರೆ ತಾನೇ
ಎಲ್ಲರೂ ಬಿಸಿ ಇಪ್ಪತ್ನಾಲ್ಕು ತಾಸು ಕಡಿಮೆ ಅನ್ನಿಸುತ್ತದೆ.

ಅಸುರರು-ಸುರರು, ನಿಶಾಚರರು-ಪಿಶಾಚಿಗಳು
ಮನುಷ್ಯರೇ ಇಲ್ಲ ಎಲ್ಲರೂ ಜಗತ್ತಿನ ವೇಗದಲ್ಲಿ
ತೇಲಿ ಹೋಗುತ್ತಿದ್ದೇವೆ ರಭಸದಿಂದ ಮರಳಿ
ವಾಪಾಸು ಬರಲಾಗದೆಡೆಗೆ ಘೋರ ಅಂಧಕಾರದೊಳಗೆ.

ಮುಳುಗಿ ಹೋಗುತ್ತಿದ್ದೇವೆ ಉಸಿರು ಬಿಗಿ ಹಿಡಿದು
ಕೊಂಡು ನೀರಿನೊಳಗಿಂದ ಜಗವ ನೋಡಲು ತವ
ಕಿಸುತ್ತಿದ್ದೇವೆ ಕಣ್ಣಿದ್ದೂ ಕುರುಡಾರಾಗಿ ರಾತ್ರಿಯ
ಕತ್ತಲೆಯಲಿ ಮುತ್ತನರಿಸಿ ಮಾಲೆ ಮಾಡುತ್ತಿದ್ದೇವೆ.

***ಸಖಾರಾಮ ಉಪ್ಪೂರು***

## ನೀ ಏಕೆ ಅಗಲಿದೆ ಬೇಗ



ಓ ಸ್ನೇಹದ ಜೀವವೇ...
ನೀ ಏಕೆ ಅಗಲಿದೆ ಬೇಗ
ತಿರುಗಿಬಾರದೂರಿಗೆ ಈಗ

ಶತಶತ ಮಾನಗಳ
ಅಸಮಾನತೆಯ ವಿರುದ್ಧ
ಸಿಡಿದೆದ್ದ ಯೋಧ ನೀನು
ಭಂಡಾಯ ಸಾಹಿತ್ಯದ
ಬರವಣಿಗಯ ಶೂರ ನೀನು
ಸಮಾನತೆಗಾಗಿ ಹೋರಾಟ
ನೀ ಕೊಟ್ಟ ವರದಾನ
ನಿನ್ನಯ ಜನಕೆ
ಶೋಷಿತ ಈ ಜಗಕೆ

ಓ ಸ್ನೇಹದ ಜೀವ
ನೀನೇಕೆ ಅಗಲಿದೆ ಬೇಗ
ತಿರುಗಿ ಬಾರದೂರಿಗೆ ಈಗ

***ಹರಿಪ್ರಿಯ***

(ಈಚೆಗೆ ಅಗಲಿದ ಹಿರಿಯ ಕವಿ
ಕೆ. ಸಿದ್ದಲಿಂಗಯ್ಯ ಅವರನ್ನು ನೆನೆದು ಬರೆದ ಕವಿತೆ)

ವಿಚಾರ

# ದೇಶ ಎತ್ತ ಸಾಗುತ್ತಿದೆ?



ನಮ್ಮ ದೇಶಕ್ಕೆ ಭವ್ಯ ಭವಿಷ್ಯ ಇದೆ. ಏಕೆಂದರೆ ಜಗತ್ತಿನ ಬಹುತೇಕ ರಾಷ್ಟ್ರಗಳಿಗೆ ಹೋಲಿಸಿದಾಗ ಭಾರತವು ಒಂದು ನವ ಯುವಕ-ಯುವತಿಯರಿಂದ ಕೂಡಿದ ಒಂದು ಪ್ರತಿಭಾಶಾಲಿ ದೇಶ. ನಮ್ಮ ದೇಶಕ್ಕೆ ಬಹಳ ಆಳವಾದ ಮತ್ತು ಪುರಾತನವಾದ ಇತಿಹಾಸವಿದೆ. ಬಹಳ ಹಿಂದಿನಿಂದಲೂ ಭಾರತೀಯರು ಜಗತ್ತಿಗೆ ಒಂದಿಲ್ಲೊಂದು ರೂಪದಲ್ಲಿ ಮಾರ್ಗದರ್ಶಿಗಳಾಗಿದ್ದಾರೆ. ವೇದ, ಪುರಾಣಗಳು, ಮಹಾಭಾರತ-ರಾಮಾಯಣ ಮತ್ತಿತರ ಭಗವತ್‌ಗೀತೆ, ಉಪನಿಷತ್ತುಗಳು ಹೀಗೇ ನೂರಾರು ಮಹತ್ವಪೂರ್ಣವಾದ ಗ್ರಂಥಗಳು ಕಾಲಕಾಕ್ಕೆ ಜಗತ್ತಿಗೆ ತಮ್ಮ ಸಂದೇಶಗಳನ್ನು ನೀಡುತ್ತಲೇ ಬಂದಿವೆ.

ಹಿಂದೂ ಧರ್ಮದ ಜೊತೆ ಜೊತೆಗೆ ಬೌದ್ಧ, ಜೈನ, ಕ್ರೈಸ್ತ, ಇಸ್ಲಾಂ, ಪಾರ್ಸಿ, ಸಿಖ್ ಇನ್ನಿತರ ಧಾರ್ಮಿಕ ಚಿಂತನೆಗಳೂ ಕೂಡಾ ದೇಶ ಹಾಗೂ ಪ್ರಪಂಚದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಗಳನ್ನು ನೀಡುತ್ತಾ ಬಂದಿವೆ. ಈ ಪೈಕಿ ಬೌದ್ಧ ಮತ್ತು ಜೈನ ಧರ್ಮಗಳು ಹಿಂದೂ ಧರ್ಮದ ಕೆಲವು ಕುಂದು ಕೊರತೆಗಳನ್ನು ಸರಿಪಡಿಸಲು ತಮ್ಮದೇ ಆದ ಪರ್ಯಾಯ ವಿಧಿ ವಿಧಾನಗಳನ್ನು ನೀಡಿವೆ. ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳು ವಿದೇಶದಿಂದ ಬಂದು ಇಲ್ಲಿ ಸಾಕಷ್ಟು ಪ್ರಭಾವ ಬೀರುತ್ತಿವೆ. ಸಿಖ್ ಧರ್ಮವು ವಿಭಿನ್ನ ರೀತಿಯಲ್ಲಿ ಹಿಂದೂ ಧರ್ಮದ ಕೆಲವು ವಿಚಾರಗಳನ್ನು ತನ್ನದಾಗಿಸಿಕೊಂಡು ತನ್ನ ಅನುಯಾಯಿಗಳಿಗೆ ಶಾಂತಿ-ನೆಮ್ಮದಿ ಹಾಗೂ ಮೋಕ್ಷದ ದಾರಿ ತೋರಿಸಿದೆ. ಇಷ್ಟೇ ಅಲ್ಲದೆ 12ನೇ ಶತಮಾನದಲ್ಲಿ ಬಸವಣ್ಣನವರು ಸ್ಥಾಪಿಸಿದ ವೀರಶೈವ ಪಂಥ, ಮುಂದಿನ ದಿನಗಳಲ್ಲಿ ನೂರಾರು ಸಮಾಜ ಸುದಾರಕರು, ಚಿಂತಕರು, ದಾಸರು, ಗುರುಗಳು, ಆಚಾರ್ಯರು ಸ್ಥಾಪಿಸಿ ಪ್ರಚಾರಪಡಿಸಿದ ಹಿಂದೂ ಧರ್ಮದ ವಿವಿಧ ಪ್ರಕಾರಗಳು, ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಭಕ್ತಿಪಂಥ, ರಾಜಯೋಗ ಇನ್ನಿತರ ಸರಳ ದಿನನಿತ್ಯದ ಜೀವನದಲ್ಲಿ ಪ್ರತಿಯೊಬ್ಬರೂ ಅಳವಡಿಸಿ ಆಚರಿಸಿಕೊಂಡು ಬರಬಹುದಾದ ಆಚಾರ-ವಿಚಾರಗಳನ್ನು ಪಸರಿಸುವಲ್ಲಿ ಕಾರಣೀಕರ್ತರಾದರು. ಹೀಗೇ ಈ ದೇಶ ಒಂದು ವಿಶೇಷವಾದ ಮತ್ತು ಶ್ರೀಮಂತವಾದ ಧಾರ್ಮಿಕ-ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಹಿನ್ನೆಲೆಯನ್ನು ಹೊಂದಿದೆ. ಈ ವಿಚಾರಧಾರೆಯೇ ನಮ್ಮ ದೇಶದ ಅಡಿಗಲ್ಲು.

ಚರಿತ್ರೆಯುದ್ದಕ್ಕೂ ಎದ್ದು ಕಾಣುವ ಇನ್ನೊಂದು ಸಂಗತಿಯೆಂದರೆ ನಮ್ಮ ದೇಶದ ಮೇಲೆ ದಂಡೆತ್ತಿ ಬಂದ ನೂರಾರು ಮಂದಿ ವಿದೇಶಿ ರಾಜರು, ಸುಲ್ತಾನರು ಮತ್ತು ವ್ಯಾಪಾರಿಗಳು ಹಾಗೂ ಚರಿತ್ರಕಾರ ಪ್ರವಾಸಿಗರು ಕೂಡ ಈ ದೇಶದ ಚರಿತ್ರೆ ಹಾಗೂ ಜನ ಜೀವನದ ಮೇಲೆ ಬಾರೀ ಪ್ರಭಾವ ಬೀರಿದ್ದಾರೆ. ದೇಶದ ಒಳಗೂ ಕೂಡಾ ಬೇರೆ ಬೇರೆ ರಾಜ ಮಹಾರಾಜರು ಮತ್ತು ಅವರ ಸಾಮಂತರು, ಪಾಳೆಯಗಾರರು ತಮ್ಮದೇ ಆದ ರೀತಿಯಲ್ಲಿ ಪರಸ್ಪರರ ಮೇಲೆ ಒತ್ತಡಹಾಕಿ ಪ್ರಭಾವ ಬೀರಿದ್ದಾರೆ. ಇಷ್ಟೇ ಅಲ್ಲದೆ ಸುಮಾರು 200 ವರ್ಷಗಳ ಕಾಲ ಬ್ರಿಟೀಷರು, ಪೋರ್ಚುಗೀಸರು ಮತ್ತು ಫ್ರೆಂಚ್ ಸಾಮ್ರಾಜ್ಯಶಾಹಿಗಳು ಕೂಡಾ ನಮ್ಮ ದೇಶದ ಮೇಲೆ ಪ್ರಭಾವ ಬೀರಿದ್ದಾರೆ. ಬ್ರಿಟೀಷರ ಆಳ್ವಿಕೆಯ ಅಡಿಯಲ್ಲಿ ನಮ್ಮ ದೇಶ ಅವರ ವಸಾಹತು ರಾಷ್ಟ್ರವಾಗಿತ್ತು.

ಹೀಗೇ ರಾಜಮಹಾರಾಜರುಗಳ, ವಿದೇಶೀ ಅನ್ವೇಷಕರ ಹಾಗೂ ಸಾಮ್ರಾಜ್ಯಶಾಹೀಗಳ ಪ್ರಭಾವಕ್ಕೆ ಒಳಗಾದ ಭಾರತ ತನ್ನದೇ ಆದ ರೀತಿಯಲ್ಲಿ ಅದನ್ನೆಲ್ಲಾ ಎದುರಿಸಿ ತನ್ನ ಅಸಾಧ್ಯ ಶಕ್ತಿ-ಸಾಮರ್ಥ್ಯದಿಂದಾಗಿ ಇಡೀ ವಿಶ್ವಕ್ಕೆ ಕೊಡುಗೆ ನೀಡಿದೆ. ಇಂಥಹ ಅರ್ಥಗರ್ಭಿತ ಚರಿತ್ರೆ-ಇತಿಹಾಸ ಹೊಂದಿರುವ ಮತ್ತು ವಿಶ್ವದ ಭವಿಷ್ಯದಲ್ಲಿ ತನ್ನದೇ ಆದ ಅದ್ಭುತ ಪ್ರಭಾವ ಬೀರಬಲ್ಲ ಬುದ್ಧಿಶಕ್ತಿ-ಮಾನವ ವರ್ತಮಾನ ಹೇಗಿದೆ? ನಾವು ಇಂದು ಸರಿದಾರಿಯಲ್ಲಿ ಪಯಣಿಸುತ್ತಿದ್ದೇವೆಯೇ? ಎಂಬ ಮುಂತಾದ ಮೂಲಭೂತ ಪ್ರಶ್ನೆಗಳನ್ನು ಇಂದಿನ ಯುವ ಜನಾಂಗ ತಮಗೆ ತಾವೇ ಹಾಕಿಕೊಂಡು ತಮ್ಮ ಆತ್ಮ ಶೋಧನೆ ಮಾಡಬೇಕಾಗಿದೆ.

ನಮ್ಮ 74 ವರ್ಷಕ್ಕೂ ಮೇಲ್ಪಟ್ಟ ಸ್ವತಂತ್ರ ಭಾರತ, ಅದರ ಸಂವಿಧಾನ, ಅದು ನಡೆದು ಬಂದ ರೀತಿ, ನಮ್ಮ ಶಿಕ್ಷಣ, ಸ್ವಾಸ್ಥ ಆರೋಗ್ಯ ಪದ್ಧತಿಗಳು, ನಮ್ಮ ಕೈಗಾರಿಕಾ ಬೆಳವಣಿಗೆ, ನಮ್ಮ ಸಮಸ್ತ ಪ್ರಜೆಗಳ ಆರ್ಥಿಕ, ಸಾಮಾಜಿಕ, ಮತ್ತು ಶೈಕ್ಷಣಿಕ ಸ್ಥಿತಿ-ಗತಿ, ಸಮಾನತೆ, ನ್ಯಾಯ, ಕಾನೂನು ವ್ಯವಸ್ಥೆ ನಮ್ಮ ಗಡಿ ಸಂರಕ್ಷಣೆ ಮತ್ತು ಆಂತರಿಕ ಸುರಕ್ಷತೆ, ವಿವಿಧ ಜಾತಿ-ಮತ-ಧರ್ಮಗಳ ಹಾಗೂ ಹೆಣ್ಣು-ಗಂಡು-ಲಿಂಗಗಳ ನಡುವಿನ ಸಾಮರಸ್ಯ, ಹೊಂದಾಣಿಕೆ ವಿಚಾರದಲ್ಲಿ ನಾವೆಲ್ಲರೂ ಗಂಭೀರವಾದ ಆತ್ಮಮಂಥನ ಮಾಡಬೇಕಾಗಿದೆ. ಈ ರೀತಿಯ ಒಂದು ಮುಕ್ತ ಚರ್ಚೆ, ಚಿಂತನೆ ದೇಶದಾದ್ಯಂತ ನಡೆದು ನಮ್ಮ ಭದ್ರ ಬುನಾದಿಯ ಮೇಲೆ ನಿಂತಿರುವ ಭವ್ಯ ಭವಿಷ್ಯವನ್ನು ಹೊಂದಿರುವ ಭಾರತದ ಇಂದಿನ ಸ್ಥಿತಿ-ಗತಿಗಳನ್ನು ಕೂಲಂಕುಶವಾಗಿ ನೋಡಿ ಪರಿಸ್ಥಿತಿ ಸುಧಾರಿಸಿ ಬೆಳೆಸಬೇಕಾಗಿದೆ.

ನಮ್ಮ ಕಣ್ಣ ಮುಂದೇ ನಡೆಯುತ್ತಿರುವ ಮಾನವ ಮೌಲ್ಯಗಳ ನಾಶ, ದುಷ್ಕರ್ಮಿಗಳನ್ನು ನೋಡಿಯೂ ನೋಡದಂತೆ ಮಾಡುವ ಅಥವಾ ನಮ್ಮ ರಾಜಕೀಯ ಲಾಭಕ್ಕಾಗಿ ಅಂತಹ ದುಷ್ಕೃತ್ಯಗಳನ್ನು ಸರಿ ಎಂದು ಪ್ರತಿಪಾದಿಸುವುದು ಎಷ್ಟು ಸರಿ. ಇಂದು ನನ್ನ ಮನೆ ಸುರಕ್ಷಿತವಾಗಿದೆ ಎಂಬ ತಪ್ಪು ಕಲ್ಪನೆ ಅಥವಾ ಭ್ರಮೆಯಿಂದ ಬೇರೊಬ್ಬರ ಮನೆಗೆ ಬೆಂಕಿ ಬಿದ್ದಾಗ ಕಣ್ಣು ಮುಚ್ಚಿಕೊಂಡಂತೆ ಅಥವಾ ಒಳ್ಳೆಯದೇ ಆಯಿತು ಹಾಗೇ ಆಗಬೇಕು ಎಂದು ಖುಷಿಪಟ್ಟುಕೊಂಡಷ್ಟೇ ಮೂರ್ಖತನವಲ್ಲವೇ?. ಒಟ್ಟಾರೆ ಸಮಾಜ, ದೇಶ ಹಾಗೂ ಮನುಕುಲದ ಹಿತದೃಷ್ಟಿಯಿಂದ ನಾವಿಂದು ಯೋಚಿಸಬೇಕಾಗಿದೆ. ಇಂದು ನಮ್ಮ ರಾಜಕೀಯ ವೈರಿಗಳನ್ನು ಮುಗಿಸಿ ಬಿಡುವ ಹುಮ್ಮಸ್ಸಿನಲ್ಲಿ ನಮ್ಮ ಅಡಿಪಾಯವನ್ನೇ ಕಿತ್ತೊಗೆದರೆ ನಾಳೆ ನಮ್ಮ ಗೋಡೆ, ಮಾಡುಗಳ ಗತಿ ಏನು? ನಾವು ಇಂದಿನದಷ್ಟೇ ಯೋಚಿಸಿದರೆ ನಮಗೆ ನಾಳೆ ಬೇಡವೇ? ನಮ್ಮ ನಿನ್ನೆಯನ್ನು ಸರಿಪಡಿಸುವ ಅಬ್ಬರದಲ್ಲಿ ನಾವು ನಮ್ಮ ಇಂದು ಮತ್ತು ನಾಳೆಯನ್ನು ಬಲಿಕೊಡುತ್ತಿದ್ದೇವೆಯೇ?

ನಮ್ಮ ಮಕ್ಕಳ ಭವಿಷ್ಯದ ಜೊತೆ ಈ ರೀತಿ ಬೇಜವಾಬ್ದಾರಿಯಿಂದ ವರ್ತಿಸುವುದು ಸರಿಯೇ? ನಾವು ನಮ್ಮ ಮುಂದಿನ ಪೀಳಿಗೆಗೆ ಏನು ಒಳಿತು ಅಥವಾ ಏನು ಬೇಕು ಎಂದು ಆ ಮುಂದಿನ ಪೀಳಿಗೆಯವರನ್ನು ಕೇಳದೆಯೇ ತೀರ್ಮಾನ ತೆಗೆದುಕೊಳ್ಳುತ್ತಿದ್ದೇವೆಯೇ? ಒಂದು ತಪ್ಪನ್ನು ಸರಿಮಾಡು ಭರದಲ್ಲಿ ಇನ್ನೂ ಅನೇಕ ತಪ್ಪುಗಳನ್ನು ಮಾಡುವುದು ಸರಿಯೇ? ಆಗಿ ಹೋದ, ಅನುಭವಿಸಿದ ಘಟನೆಗಳನ್ನು ದೊಡ್ಡದಾಗಿ ಮಾಡಿ ಸೇಡು ತೀರಿಸಿಕೊಳ್ಳುವುದರಲ್ಲೇ ನಮ್ಮ ಇಂದನ್ನು ಕಳೆದು ನಾಳೆಯನ್ನು ಬರಡಾಗಿಸುವುದು ಕತ್ತಲೆಗೆ ತಳ್ಳುವುದು ಯಾವ ನ್ಯಾಯ, ನಮ್ಮ ಮುಂದಿನ ಪೀಳಿಗೆಗೆ ನಾವು ಯಾವ ಭವಿಷ್ಯವನ್ನು ಬಿಟ್ಟು ಹೋಗುತ್ತಿದ್ದೇವೆ. ಈ ಎಲ್ಲಾ ವಿಚಾರಗಳ ಚರ್ಚಿಸದೇ ಹೋದರೆ ನಮಗರಿವಾಗುವಾಗ ಕಾಲ ಮೀರಿ ಹೋಗಿರುತ್ತದೆ. ನಮ್ಮ ಇಂದಿನ-ವರ್ತಮಾನದ ತೀರ್ಮಾನಗಳು ಮತ್ತು ಆಚರಣೆ ಅನುಷ್ಠಾನಗಳು ನಮ್ಮ ನಾಳೆಯನ್ನು ಸೃಷ್ಟಿಸುತ್ತವೆ. ನಮ್ಮ ಚರಿತ್ರೆಯಿಂದ ಪಾಠ ಕಲಿಯುವ ಬದಲು ಮತ್ತೆ ಮತ್ತೆ ಅದೇ ತಪ್ಪನ್ನು ಮಾಡುವುದು ಯಾವ ಪುರುಷಾರ್ಥ. ನಮ್ಮ ಇಂದಿನ ಶಕ್ತಿಯನ್ನು ಭವ್ಯ ಭವಿಷ್ಯದ ನಿರ್ಮಾಣಕ್ಕಾಗಿ ಸದಾ ವಿನಿಯೋಗ ಮಾಡಿ ಸುಂದರ ನಾಳೆಯನ್ನು ನಿರ್ಮಿಸಿದರೆ ನಮ್ಮ ಶ್ರಮ ಸಾರ್ಥಕ. ನಮ್ಮ ಮುಂದಿನ ಪೀಳಿಗೆ ನಮ್ಮ ಮಕ್ಕಳು ನಮ್ಮನ್ನು ಸಂತೋಷದಿಂದ ನೆನಪಿಸಿಕೊಳ್ಳುವಂತಾದೀತು. ಹಾಗಾಗಿ ಇದೀಗ ಚಿಂತಿಸಬೇಕಾದ, ಚರ್ಚಿಸಬೇಕಾದ ಸರಿಹೆಜ್ಜೆಗಳನ್ನಿಡಬೇಕಾದ ಅಗತ್ಯ ಅತೀ ಅನಿವಾರ್ಯವಾಗಿದೆ. ಸಮಸ್ತ ಜಗತ್ತಿನ ಭವಿಷ್ಯದ ದೃಷ್ಟಿಯಿಂದಲೂ ಭಾರತ ವಿಶ್ವಕ್ಕೆ ದಾರಿತೋರುವ ತನ್ನ ಸ್ಥಾನವನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಾಗಿದೆ.

ದೇಶ-ದೇಶಗಳ ದ್ವೇಷ ಒಂದೇಯಾದರೆ ದೇಶ-ರಾಜ್ಯಗಳೊಳಗಣ ಜನ ಸಮುದಾಯಗಳ ನಡುವಣ ದ್ವೇಷ ಇನ್ನೊಂದೆಡೆ. ಈ ದ್ವೇಷದ ಬೆಂಕಿ ನಮ್ಮೆಲ್ಲರನ್ನು ಸುಡುವ ಅಪಾಯ ಇದೆ. ಇಂದಿನ ನಮ್ಮ ಪ್ರತಿ ಮಾತು, ಪ್ರತಿ ಹೆಜ್ಜೆ, ನಮ್ಮ ಭವಿಷ್ಯವನ್ನು ನಿರ್ಮಿಸಲಿದೆ. ಹಾಗಾಗಿ ನಾವೆಲ್ಲರೂ, ಮುಖ್ಯವಾಗಿ ಯುವ ಜನಾಂಗ ಇಂದು ತಮಗೆ ತಾವೇ ಕೇಳಿಕೊಳ್ಳಬೇಕಾದ ಪ್ರಶ್ನೆ ನಾವು ಎಂತಹ ನಾಳೆಯನ್ನು ಸೃಷ್ಟಿಸುತ್ತಿದ್ದೇವೆ. ನಮ್ಮ ಹಿರಿಯರು ಇಡುತ್ತಿರುವ ಹೆಜ್ಜೆ ನಮ್ಮ ಭವಿಷ್ಯಕ್ಕೆ ಎಷ್ಟು ಸುರಕ್ಷಿತ ಎಂದು ಚಿಂತಿಸಬೇಕಾಗಿದೆ.

***ಸಖಾರಾಮ ಉಪ್ಪೂರು***

# 'ಅಭಿಮತ' ಸ್ವೀಕರಿಸಿದ ನೂತನ ಕೇಂದ್ರ ಸಚಿವರು







**ದೆಹಲಿ ಕರ್ನಾಟಕ ಸಂಘದ ಮುಖವಾಣಿ 'ಅಭಿಮತ'ದ ಜುಲೈ ಸಂಚಿಕೆಯನ್ನು ನೂತನವಾಗಿ ಆಯ್ಕೆಯಾದ ಕೇಂದ್ರ ಸಚಿವರುಗಳಾದ ಸನ್ಮಾನ್ಯ ಭಗವಂತ ಖೂಬ, ಎ. ನಾರಾಯಣ ಸ್ವಾಮಿ ಮತ್ತು ಶೋಭಾ ಕರಂದ್ಲಾಜೆ ಅವರಿಗೆ ನೀಡಲಾಯಿತು. ಈ ಸಂದರ್ಭದಲ್ಲಿ ಅಭಿಮತದ ಪ್ರಧಾನ ಸಂಪಾದಕರೂ ಆಗಿರುವ ಸಂಘದ ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಜಂಟಿ ಕಾರ್ಯದರ್ಶಿ ರಾಧಾಕೃಷ್ಣ, ಕಾರ್ಯಕಾರಿ ಸಮಿತಿ ಸದಸ್ಯ ಸಂತೋಷ ಜೆ., ಹಿರಿಯ ಕನ್ನಡಿಗ ವಿ.ವಿ. ಬಿರಾದಾರ ಮೊದಲಾದರು ಉಪಸ್ಥಿತರಿದ್ದರು.**

# ನಂದು ಯಾವ ಇಸಮ್ಮೂ ಇಲ್ಲ, ಬರೀ ಹ್ಯೂಮನಿಸಮ್ಮು

**-ಡಾ. ಬಿ.ವಿ ರಾಜಾರಾಂ**

ದಿನಕರ ಫೌಂಡೇಷನ್ ಆಯೋಜಿಸುತ್ತಾ ಬಂದಿರುವ ಆನ್‌ಲೈನ್ ಸರಣಿ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಆಗಮಿಸಿದ ಕಲಾಗಂಗೋತ್ರಿಯ ಸಂಸ್ಥಾಪಕರೂ, ರಂಗಾಯಣದ ನಿಕಟಪೂರ್ವ ನಿರ್ದೇಶಕರೂ ಆದ ಡಾ. ಬುಕ್ಕಾಂಬುಧಿ ವೆಂಕಟೇಶಯ್ಯ ರಾಜಾರಾಂ ಅವರು ತಮ್ಮ ಐದು ದಶಕಗಳ ರಂಗ ಪಯಣವನ್ನು ರಂಗಾಸಕ್ತರೊಂದಿಗೆ ಹಂಚಿಕೊಂಡರು. ಸಂವಾದದಲ್ಲಿ ಸಂತೋಷ್ ಉಪಾಧ್ಯಾಯ ಅವರೊಂದಿಗೆ ಮಾತನಾಡುತ್ತಾ ತಮ್ಮ ಸಂಘಟನಾ ನಿರ್ವಹಣೆಯ ಚಾತುರ್ಯವು ತಮ್ಮ ತಾತ ವೆಂಕಟ್ರಮಣ ಭಾಗವತರಿಂದ ತಮಗೆ ಬಂದಿರಬೇಕು ಎಂಬುದರಿಂದ ಪ್ರಾರಂಭಿಸಿ ಶಾಲಾ ದಿನಗಳಲ್ಲಿ ತಾವು ನಾಟಕಗಳನ್ನು ಮಾಡುತ್ತಿದ್ದ ರೀತಿ ಹಾಗೂ ತಮ್ಮ ಮೇಲೆ ಯಾರೆಲ್ಲ ಪ್ರಭಾವ ಬೀರಿದ್ದರು ಎಂಬುದನ್ನು ನೆನಪಿಸಿಕೊಂಡರು.

ತಾವು ರಂಗಭೂಮಿಯನ್ನು ಗಂಭೀರವಾಗಿ ಪರಿಗಣಿಸುವುದಕ್ಕೆ ಮುಖ್ಯ ಕಾರಣೀಕರ್ತರು ಎಚ್.ಕೆ. ರಂಗನಾಥ್ ಅವರು ಎಂದು ಹೇಳುತ್ತ ತಮ್ಮ ಕಾಲೇಜು ದಿನಗಳಲ್ಲಿ ನ್ಯಾಷನಲ್ ಕಾಲೇಜು ಬೆಂಗಳೂರಿನಲ್ಲಿ ನಾಟಕ ಕೇಂದ್ರ ಪ್ರಾರಂಭಿಸುವುದಕ್ಕೆ ದಿ. ಪ್ರೊ. ಎಚ್ ನರಸಿಂಹಯ್ಯನವರು ಯಾವ ರೀತಿ ಪ್ರಮುಖ ಪಾತ್ರ ವಹಿಸಿದರು ಎಂಬುದನ್ನು ವಿವರಿಸಿದರು. ನಾಟ್ಯಶಾಸ್ತ್ರದ ಕುರಿತು ಆಳವಾಗಿ ತಿಳಿಯುವುದಕ್ಕಾಗಿ ಸಂಸ್ಕೃತದಲ್ಲಿ ಎಂ.ಎ. ಮಾಡಿ ತದನಂತರ ಅದರಲ್ಲಿ ಇನ್ನೂ ಆಸಕ್ತಿ ಮೂಡಿ ತಾವು ಪಿ.ಎಚ್.ಡಿ. ಯನ್ನೂ ಮಾಡಿದ್ದು ನಂತರ ದಿನಗಳಲ್ಲಿ ನಾಟಕಗಳ ರೂಪುರೇಷೆಯನ್ನು ಸುಧಾರಿಸುವುದರಲ್ಲಿ ಸಾಕಷ್ಟು ಅನುಕೂಲವಾಯಿತು ಎಂದು ಹೇಳಿದ ಡಾ. ರಾಜಾರಾಂ ಅವರು ತಮಗೆ ಕನ್ನಡ ರಂಗಭೂಮಿಯಲ್ಲಿ ಮುಖ್ಯ ತಿರುವು ನೀಡಿದ್ದು ಮುಖ್ಯಮಂತ್ರಿ ನಾಟಕ ಎಂದು ಹೆಮ್ಮೆಯಿಂದ ಹೇಳಿದರು. ಸತತ ನಲವತ್ತು ವರ್ಷಗಳ ಕಾಲ ರಾಜ್ಯದಾದ್ಯಂತ ಅಮೋಘ ಪ್ರದರ್ಶನ ಕಂಡ ಆ ನಾಟಕದ ಮೂಲಕ ಎಚ್.ಎನ್. ಚಂದ್ರಶೇಖರ್ ಅವರು ಯಾವ ರೀತಿ ಮುಖ್ಯಮಂತ್ರಿ ಚಂದ್ರುವಾಗಿ ಹೊರಹೊಮ್ಮಿದರು ಎಂಬುದನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ಇದೇ ವರ್ಷ 'ಮತ್ತೆ ಮುಖ್ಯಮಂತ್ರಿ' ನಾಟಕವನ್ನು ಪ್ರದರ್ಶಿಸಿದ್ದು ಅದರಲ್ಲಿ ಕಳೆದ ನಲವತ್ತು ವರ್ಷಗಳಲ್ಲಿ ಆದ ಸಾಮಾಜಿಕ, ರಾಜಕೀಯ ಸ್ಥಿತ್ಯಂತರಗಳನ್ನು ಜನರ ಮುಂದಿಡಲು ಪ್ರಯತ್ನಿಸಿದ್ದಾಗಿ ಅವರು ಹೇಳಿದರು. ರಂಗಭೂಮಿಯಲ್ಲಿ ಇರಬಹುದಾದ 'ಇಸಂ' ಗಳ ಕುರಿತು ತಮ್ಮ ನಿಲುವೇನು ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ರಾಜಾರಾಂ ಅವರು ತಮ್ಮದೇನಿದ್ದರೂ ಹ್ಯೂಮನಿಸಂ ಎಂದು ಮಾರ್ಮಿಕವಾಗಿ ಉತ್ತರಿಸಿದರು. ತಮ್ಮ ಕಲಾಗಂಗೋತ್ರಿ ನಾಟಕ ಸಂಸ್ಥೆಯು ಬೆಳೆದು ಬಂದ ದಾರಿ ಹಾಗೂ ಮುಂದಿರುವ ಸವಾಲುಗಳ ಕುರಿತು ಮಾತನಾಡಿದ ಶ್ರೀಯುತರು ಸಂಸ್ಥೆ ಬೆಳೆಯುವುದಕ್ಕೆ ಕಾರಣೀಭೂತರಾದ ಎಲ್ಲರನ್ನೂ ಕಾರ್ಯಕ್ರಮದಲ್ಲಿ ನೆನಪಿಸಿಕೊಂಡರು ಮತ್ತು ತಮ್ಮ ಈ ಎಲ್ಲಾ ಅನುಭವಗಳು ದಿನಕರದ ಬೆಳವಣಿಗೆಗೆ ಪೂರಕವಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದ ಆರಂಭದಲ್ಲಿ 'ದೀಪವು ನಿನ್ನದೆ ಗಾಳಿಯು ನಿನ್ನದೆ' ಹಾಡನ್ನು ಹಾಡುವ ಮೂಲಕ



ಡಾ. ಬಿ.ವಿ. ರಾಜಾರಾಂ

ಕು. ಪೂರ್ಣಿಮಾ ಅಡಿಗ ಶುಭಾರಂಭ ಮಾಡಿದರು. ಗಿರೀಶ್ ಗೌಡ ಅವರು ದಿನಕರ ಫೌಂಡೇಷನ್ ನಡೆದು ಬಂದ ದಾರಿಯನ್ನು ಪರಿಚಯಿಸಿ ಕಾರ್ಯಕ್ರಮವನ್ನು ನಿರ್ವಹಿಸಿದರು. ಮೇ 30ರಂದು ಆನ್‌ಲೈನ್ ನಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಟಿ.ಎಸ್ ರಮೇಶ್ ಅವರು ತಾಂತ್ರಿಕ ಸಹಕಾರ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ ಸಂಯೋಜಕರಾದ ಶ್ರೀ ಶಿವಾನಂದ ಇಂಗಳೇಶ್ವರ ಅವರು ವಂದನಾರ್ಪಣೆ ಮಾಡಿದರು.

***ಪ್ರಭಾ ಸಂತೋಷ್***

# ದೆಹಲಿ ಕನ್ನಡ ಶಾಲೆಯ ಅತ್ಯುತ್ತಮ ಪರೀಕ್ಷಾ ಫಲಿತಾಂಶ

ಸಿಬಿಎಸ್ಇ 10ನೇ ಹಾಗೂ 12ನೇ ತರಗತಿಯ 2020-21ನೇ ಸಾಲಿನ ಪರೀಕ್ಷಾ ಫಲಿತಾಂಶವು ಪ್ರಕಟವಾಗಿದ್ದು, ನವದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯು ಶೇ. 100 ಫಲಿತಾಂಶವನ್ನು ದಾಖಲಿಸಿದೆ.

10ನೇ ತರಗತಿಯಲ್ಲಿ 96.8% ಅಂಕವನ್ನು ಗಳಿಸಿದ ನಿರ್ಮಲ್ ಜೋಶಿ ಸಂಸ್ಥೆಯಲ್ಲಿ ಅತ್ಯಧಿಕ ಗಳಿಸಿದ ವಿದ್ಯಾರ್ಥಿಯಾಗಿರುತ್ತಾರೆ. ಹಾಗೆಯೇ 12ನೇ ತರಗತಿಯಲ್ಲಿ ಒಟ್ಟು 108 ವಿದ್ಯಾರ್ಥಿಗಳಲ್ಲಿ 63 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯನ್ನು ಪಡೆದಿದ್ದು, 98.8% ಅಂಕವನ್ನು ಗಳಿಸಿದ ಕಲಾ ವಿಭಾಗದ ವಿದ್ಯಾರ್ಥಿನಿ ಕುಮಾರಿ ದೀಕ್ಷಾ ಗೊಡಿಯಾಲ್ ಅವರು ಸಂಸ್ಥೆಯಲ್ಲಿ ಅತ್ಯಧಿಕ ಅಂಕ ಗಳಿಸಿರುತ್ತಾರೆ ಎಂದು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವ್ಯವಸ್ಥಾಪಕರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ತಿಳಿಸಿರುತ್ತಾರೆ. ಕೊರೊನಾ ಕಾಲಘಟ್ಟದ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ವಿದ್ಯಾರ್ಥಿಗಳು ತೋರಿದ ಬದ್ಧತೆ ಹಾಗೂ ಪೋಷಕರ ಪರಿಶ್ರಮ ಜೊತೆಗೆ ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸಿದಂತಹ ವಿದ್ಯಾ ಸಂಸ್ಥೆಯ ಪ್ರಾಂಶುಪಾಲರಾದ ಪ್ರಶಾಂತ ಕುಮಾರ್, ಶಾಲಾ ಶಿಕ್ಷಕ ಶಿಕ್ಷಕೇತರ ವೃಂದದವರನ್ನು ಸಂಸ್ಥೆಯ ಆಡಳಿತ ಮಂಡಳಿ ಅಭಿನಂದಿಸಿದೆ.




***ಅರವಿಂದ ಬಿಜ್ಜೈ***

# ರಂಗಭೂಮಿ ಚಿತ್ರ ಕಲಾವಿದ ಕೆ. ಅಮೀನ್ ಪೇಂಟರ್ ಅವರೊಂದಿಗೆ ಸಂವಾದ

ಜಾನಪದ, ವೃತ್ತಿ ಮತ್ತು ಹವ್ಯಾಸಿ ರಂಗಭೂಮಿಯ ಶ್ರೇಯಸ್ಸಿಗಾಗಿ ಶ್ರಮವಹಿಸಿದ ನಟ, ನಾಟಕಕಾರರು, ನಿರ್ದೇಶಕರು, ನೇಪಥ್ಯ ರಂಗಕರ್ಮಿಗಳೊಂದಿಗಿನ ಸಂವಾದ ನಡೆಸಿ, ಆ ಮೂಲಕ ದಾಖಲೀಕರಣಗೊಳ್ಳಬೇಕು ಎಂಬ ಸದುದ್ದೇಶ ಹೊಂದಿ 'ದಿನಕರ'ವು ಕಾರ್ಯಕ್ರಮ ಹಮ್ಮಿಕೊಳ್ಳುತ್ತಾ ಬರುತ್ತಿದೆ.

ರಂಗಭೂಮಿಯಲ್ಲಿ ನಟ, ಸಂಗೀತಕಾರ, ನಾಟಕಕಾರರನ್ನು ಪರೋಕ್ಷವಾಗಿ ಕಾಣಬಹುದು. ಆದರೆ, ಅವರೆಲ್ಲರ ಪರೋಕ್ಷ ವ್ಯಕ್ತಿ ಚಿತ್ರಣದ ಮೇಲೆ ಬೆಳಕು ಚೆಲ್ಲುವ ಹಾಗೂ ನಾಟಕದ ವಿಷಯ ವಸ್ತುವಿಗೆ ತಕ್ಕ ಹಾಗೆ ಪ್ರೇಕ್ಷಕರ ಮೇಲೆ ಪ್ರಭಾವ ಬೀರುವ ಮನಮೋಹಕ ದೃಶ್ಯಾವಳಿಗಳ ಪರದೆ-ಸೀನರಿಗಳ ಚಿತ್ರ ಬಿಡಿಸುವ ಚಿತ್ರಕಾರರು ಅದರ ಜೀವಾಳವೇ ಆಗಿರುತ್ತಾರೆ.

ಇಲಕಲ್ಲಿನ ಪ್ರಸಿದ್ಧ ಚಿತ್ರಕಲಾವಿದ ಖೇಮರಾಜ ಕೆಂಧೂಳಿ ಅವರ ಶಿಷ್ಯರೂ ಆದ, ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತ ಕೆ. ಅಮೀನ ಪೇಂಟರ್ ಅವರು ದೆಹಲಿಯ ದಿನಕರ ಆಯೋಜಿಸಿದ ದಿನಾಂಕ 20.06.2021 ರಂದು ಅಂತರ್ಜಾಲ ಮೂಲಕ ನಡೆದ ಸಂವಾದದಲ್ಲಿ ಭಾಗವಹಿಸಿ, ಐದು ದಶಕಗಳ ತಮ್ಮ ಕುಂಚ ಕಲೆಯ ಮೂಲಕ ಅರಳಿದ ಚಿತ್ರಗಳು ಹಾಗೂ ಅವರ ಜೀವನ ಸಾಧನೆ ಕುರಿತು ಮಾತನಾಡಿದರು.

ಬಣ್ಣ ಬಳಿಯುವುದಷ್ಟೆ ಅಲ್ಲ ಇದೊಂದು ತಪಸ್ಸು, ಕಲ್ಪನೆಯ ಮೂಸೆಯಲ್ಲಿ ಮೂಡಿದ ಚಿತ್ರ ಪರದೆಯ ಮೂಲಕ ಮೈದಾಳುತ್ತದೆ. ಕಲ್ಪನೆಗೆ ನಿಲುಕುವುದಿಲ್ಲ. ಮನಸ್ಸು ಸಮುದ್ರದಂತೆ ಶಾಂತವಾಗಿದ್ದರೆ ಮಾತ್ರ ಸಾಧನೆಯ ಪಥ ಸುಗಮ ಎಂದು ಅಮೀನ್ ನುಡಿದರು.

ಇವರ ಗುರುಗಳಾದ ಕೆಂಧೂಳಿ ಅವರ ಕೆಲಸ ಕಾರ್ಯಗಳಿಗೆ ಸಹಾಯ ಸಹಕಾರ ಒದಗಿಸುವ ಅಮೀನ ಅವರಿಗೆ ನಾಲ್ಕಾಣೆ ಭಕ್ಷೀಸು ಗುರುವಿನಿಂದ. ನಾಲ್ಕಾಣೆ ಪಡೆದ ಅಮೀನ ಚಿತ್ರಮಂದಿರಕ್ಕೆ ಹೋಗುವುದನ್ನೇ ರೂಢಿಯಾಗಿಸಿಕೊಂಡು ಆ ನಂತು ಸಿನಿಮಾ ನೋಡುವ ಹವ್ಯಾಸದ ಜೊತೆಗೆ ಪೇಂಟಿಂಗ್ ಕಡೆಗೆ ಆಸ್ಥೆ ವಹಿಸಲು ಪ್ರೇರಕಶಕ್ತಿಯಾಯಿತು ಎನ್ನುತ್ತಾರೆ.

ಹದಿನೈದು ವರ್ಷಗಳವರೆಗೆ ಗುರು ಕೆಂಧೂಳಿಯವರೊಂದಿಗೆ ಕೆಲಸ ಮಾಡುತ್ತಲೇ ವಿವಿಧ ಬಣ್ಣ, ಅವುಗಳ ಬಳಕೆ ಕುರಿತಾಗಿ ತಿಳಿದುಕೊಳ್ಳಲು ಸಾಧ್ಯವಾಯಿತು. ಕೆಂಧೂಳಿ ಗುರುಗಳು ಅಗಾಧ ಪಾಂಡಿತ್ಯ ಹೊಂದಿದ್ದರು ಎಂದು ಹೇಳಿದರು.

ಬಣ್ಣ ಬಳಕೆಯ ಬಗ್ಗೆ ವಿವರಿಸಿದ ಅವರು ರಾತ್ರಿ ನೆನೆಹಾಕಿ, ಮುಂಜಾನೆ ಉಜ್ಜಬೇಕಾಗುತ್ತಿತ್ತು. ಬಟ್ಟು ಸವೆದು ಹೋಗುತ್ತಿದ್ದವು. ಆ ಕಾಲಘಟ್ಟದಲ್ಲಿ ಪರದೆ ತಯಾರ ಮಾಡಬೇಕಂದ್ರ ಭಾಳ ಕಷ್ಟಪಡಬೇಕಾಗ್ತಿತ್ತು. ಬಣ್ಣದಲ್ಲಿ ಸಿರಿವಂತಿಕೆ ಇತ್ತು. ಅಂತಹ ಬಣ್ಣ ಈಗ ಸಿಗೋದಿಲ್ಲ ಮಳೆ ನೀರಿನಿಂದ ಪರದೆ ನೆಂದರೂ ಕೂಡ ಕಲರ್ ಅಳಿಸಿ ಹೊಗುತ್ತಿರಲಿಲ್ಲ ಎನ್ನುತ್ತಾರೆ ಅಮೀನ.

ರಾಜಕಪೂರ ಭಾರತೀಯ ಚಲನಚಿತ್ರರಂಗದಲ್ಲಿ ದೊಡ್ಡ ಹೆಸರು, ಅವರು ನಟ, ನಿರ್ದೇಶಕರಾಗಿ ಮಾಡಿದ ಕೆಲಸ ಅನನ್ಯ. ಅವರು ಸ್ಥಾಪಿಸಿದ ಆರ್.ಕೆ. ಸ್ಟುಡಿಯೋದಲ್ಲಿ ಕಾರ್ಯನಿರ್ವಹಿಸಿದ್ದು, ತಮ್ಮ ಕೆಲಸ ಗಮನಿಸಿದ ರಾಜಕಪೂರ ಅವರು ಮೆಚ್ಚುಗೆಯ ಮಾತನಾಡಿ, ಆಶೀರ್ವಾದ ಮಾಡಿದ್ದಾರೆ ಎಂದು ಮೆಲುಕು ಹಾಕಿದರು.

ಕೆ. ಅಮೀನ ಪೇಂಟರ್ ಅವರು 'ಸೂಡಿ'ಯ ಶ್ರೀಶೈಲ ನಾಟ್ಯ ಸಂಘ, ಕಮತಗಿಯ ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಗುಡಗೇರಿಯ ಶ್ರೀ ಸಂಗಮೇಶ್ವರ ನಾಟ್ಯ ಸಂಘ, ತಾಳಿಕೋಟೆಯ ಶ್ರೀ ಖಾಸ್ಗತೇಶ್ವರ ನಾಟ್ಯ ಸಂಘ, ದಾವಣಗೆರೆಯ ಶ್ರೀ ಕೆಬಿಆರ್ ಡ್ರಾಮಾ ಕಂಪನಿ ಸೇರಿದಂತೆ, ನಾಡಿನ ಎಪ್ಪತ್ತಕ್ಕೂ ಹೆಚ್ಚು ಹೆಸರಾಂತ ನಾಟಕ ಕಂಪನಿಗಳಿಗೆ ಇವರು ಬಣ್ಣದ ಪರದೆಗಳನ್ನು ತಯಾರಿಸಿಕೊಟ್ಟಿದ್ದಾರೆ.


ಇವರ ಕೈಚಳಕವಿರುವ ಪರದೆಗಳು ಜೀವಕಳೆಯೊಂದಿಗೆ ನಾಟಕದ ಕಥೆ, ಅದರ ವರ್ಣನೆಗೆ ಅನುಗುಣವಾಗಿ ದೃಶ್ಯಗಳನ್ನು ಕಾಲ್ಪನಿಕವಾಗಿ ರೂಪಿಸಿಕೊಂಡು ಅನಾವರಣಗೊಳ್ಳುತ್ತಿತ್ತು.

ದರ್ಬಾರ ವಿಂಗ್ಸ್, ದರ್ಬಾರ ಪರದೆ, ಮಹಲ್ ಪರದೆ, ನಾಗಲೋಕ, ಪಾತಾಳಲೋಕ, ಉದ್ಯಾನವನ ಹಾಗೂ ಕೈಲಾಸದ ಚಿತ್ರಗಳ ಇವರ ಪರದೆಗಳನ್ನು ಸಾಂಗಲಿಯ ಅನುಭವಿ ಕಲಾವಿದ ವಿಷ್ಣುಭಾವು ಕುಲಕರ್ಣಿ ಅವರು ಸೇರಿದಂತೆ ಕಲಾರಾಧಕರು ಮೆಚ್ಚಿಕೊಂಡರು ಎಂದು ಅಮೀನ್ ಹೇಳಿದರು.

ಮೂರು ಆಯಾಮಗಳ ಮಾದರಿಯ ಚಿತ್ರ ಬಿಡಿಸುವಲ್ಲಿಯೂ ಪಳಗಿದವರು. ಬೆಳಕಿನಲ್ಲಿ ಮಾತ್ರ ಪೇಂಟಿಂಗ್ಸ್ ನೋಡಬಹುದಾಗಿದೆ. ಆದರೆ, ಬಣ್ಣಗಳ ಬಳಸಿ, ಕತ್ತಲಲ್ಲಿಯೂ ಸಹ ಪೇಂಟಿಂಗ್ ವೀಕ್ಷಿಸಬಹುದಾಗಿದೆ ಎಂದು ಅವರು ಹೇಳಿದರು.

ನೀನಾಸಂ, ಸ್ನೇಹರಂಗ, ಧ್ರುವ ರಂಗ ಒಳಗೊಂಡು ಇತ್ಯಾದಿ ಹವ್ಯಾಸಿ ರಂಗಭೂಮಿ ನಾಟಕ ತಂಡಗಳಿಗೆ ಅಮೀನ ಪೇಂಟರ ಅವರು ಸೆಟ್ ವರ್ಕ್ ಮಾಡಿದ್ದಾರೆ. ಡಾ. ರಾಜ್ ಕುಮಾರ್ ಅವರ ಅಭಿನಯದ 'ಶಾಂತಿ ನಿವಾಸ' ಹಾಗೂ 'ಸಾಹುಕಾರ' ನಾಟಕಗಳಿಗೆ ಅಮೀನ್ ಅವರು ಬರೆದ ಪರದೆಗಳ ಚಿತ್ರಗಳ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದರು

ಹೆಸರಾಂತ ನಾಟಕಕಾರ ಪಿ.ಬಿ. ಧುತ್ತರಗಿ ರಚನೆಯ 'ಸಂಪತ್ತಿಗೆ ಸವಾಲ್' ನಾಟಕದ ಒಂದು ದೃಶ್ಯಕ್ಕೆ ಬರೆದ ಒಣಗಲು ಹಾಕಿದ ಸೀರೆ ಹಾಗು ಟವೆಲ್ ಚಿತ್ರ ನೈಜವೆನೋ ಎಂಬಂತೆ, ನೈಸರ್ಗಿಕವಾಗಿಯೇ ಕಲೆಯ ಮೂಲಕ ಕಲಾ ಕುಸುಮ ಅರಳುತ್ತಿತ್ತು.



ಕೆ. ಅಮೀನ್ ಪೇಂಟರ, ಇಲಕಲ್ಲ

ಅಂದಿನ ಹೆಸರಾಂತ ಕಲಾವಿದ ಪಿ.ಚೆಲ್ಲಯ್ಯ ಅವರೊಂದಿಗೆ ಒಡನಾಟದ ಕುರಿತು ಅವರು ಮಾತನಾಡಿದರು.

ಕುಂಚದಿಂದ ತಿರುಪತಿ ತಿಮ್ಮಪ್ಪ, ರಾಘವೇಂದ್ರ ಸ್ವಾಮಿಗಳು, ಆಂಜನೇಯ, ಅನುಭವ ಮಂಟಪ, ಗೋಳಗುಮ್ಮಟ, ಗುಡಿ-ಗುಂಡಾರಗಳು, ಪ್ರಾಕೃತಿಕ ದೃಶ್ಯಗಳು, ಕಲ್ಪನಾತ್ಮಕ ವ್ಯಕ್ತಿ ಚಿತ್ರಗಳು ಮುಂತಾದ ಚಿತ್ರ ಬಿಡಿಸುವಲ್ಲಿ ಇವರು ಸಾಧಿಸಿದ ಸಿದ್ಧಿ ಅಪರೂಪದ್ದು ಹಾಗೂ ಮೆಚ್ಚುಗೆಗ ಪಾತ್ರವಾಗಿರುವುದು. ಹಲವಾರು ಕ್ಯಾಲೆಂಡರ್ ಮತ್ತು ಕ್ಯಾಸೆಟ್ ಕಂಪನಿಗಳಿಗೂ, ಚಲನಚಿತ್ರಗಳಿಗೂ ತಮ್ಮ ಕಲಾಸೇವೆ ಸಲ್ಲಿಸಿದ ಅಮೀನರು ಓರ್ವ ಕಲಾ ಆರಾಧಕರು.

ಕೆ. ಅಮೀನ ಪೇಂಟರ್ ಅವರು ಕಂಡ ಕನಸು ನನಸಾಗಿ, ಆಲೋಚಿಸಿದ ಯೋಜನೆಗಳು ಸಾಕಾರಗೊಳ್ಳಲಿ ಎಂದು ಶಿವಾನಂದ ಇಂಗಳೇಶ್ವರ ಅವರು ಆಶಿಸಿದರು.

ಈ ಸಂವಾದದಲ್ಲಿ ಇನ್ನೊಬ್ಬ ನೇಪಥ್ಯದ ಕಲಾವಿದ ಖಾಜಾಸಾಹೇಬ್ ಮೇಕಮುಂಗಲಿ ಅವರು ತಮ್ಮ ಐವತ್ತು ವರ್ಷದ ವೃತ್ತಿ ರಂಗಭೂಮಿಯ ಅನುಭವ ಹಂಚಿಕೊಳ್ಳುತ್ತಾ, ತಾವು ಹದಿನೈದು ವರ್ಷದವರಿದ್ದಾಗ ವೃತ್ತಿ ರಂಗಭೂಮಿ ಪ್ರವೇಶ ಮಾಡಿ ಗೇಟಕೀಪರ, ಬೋರ್ಡಿಂಗ ಕೆಲಸ, ಪರದೆ ಎಳೆಯುವುದು, ಕಲಾವಿದರಿಗೆ ಮೇಕಪ್ ಮಾಡುವುದು ಅವರ ಉಡುಗೆ ತೊಡುಗೆ ಹೊಂದಿಸಿ ಕೊಡುವುದು, ಆಗಾಗ ಚಿಕ್ಕ ಪುಟ್ಟ ಪಾತ್ರಗಳ ಅಭಿನಯ ಸೇರಿದಂತೆ, ವೃತ್ತಿ ಬದುಕಿನ ಕುರಿತು ಹಂಚಿಕೊಂಡರು.

ಈ ವೃತ್ತಿಯಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡಿರುವುದರ ಜೊತೆಗೆ ಈ ವೃತ್ತಿ ತಮಗೆ ಸಂತೃಪ್ತಿ ನೀಡಿದೆ ಎಂದು ತಿಳಿಸಿದರು.

***ಶಿವಾನಂದ ಇಂಗಳೇಶ್ವರ***

## ಶ್ರದ್ಧಾಂಜಲಿ

# ಪರಯ್ಯ ಸ್ವಾಮಿ ನಿಧನ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ 1999-2002 ಮತ್ತು 2002-2004ರ ಅವಧಿಯಲ್ಲಿ ಸೇವೆ ಸಲ್ಲಿಸಿದ್ದ ಸಂಘದ ಆಜೀವ ಸದಸ್ಯ ಶ್ರೀ ಪರಯ್ಯ ಸ್ವಾಮಿ ಅವರು ದಿನಾಂಕ 31.07.2021 ರಂದು ನಿಧನರಾಗಿದ್ದಾರೆ.

ಇವರು ದೆಹಲಿ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದರು. ಸಂಘವು ಆಯೋಜಿಸುತ್ತಿದ್ದ ಆಟೋಟ ಸ್ಪರ್ಧೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಅಗಲಿದ ಹಿರಿಯ ಕನ್ನಡಿಗ ಪರಯ್ಯ ಸ್ವಾಮಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ



## ನುಡಿ ನಮನ

# ನಮ್ಮೆಲ್ಲರ ಮಾರ್ಗದರ್ಶಕರಾಗಿದ್ದ ಪರಯ್ಯ ಸ್ವಾಮಿ

ಸರಳ ಸ್ವಭಾವದ, ಗಟ್ಟಿ ಮನಸ್ಸಿನ, ನೇರಮಾತಾಡುವ ಶ್ರೀ ಪರಯ್ಯ ಸ್ವಾಮಿಜಿಯವರು ದೆಹಲಿಯ ಲೋಕನಾಯಕ ಜಯಪ್ರಕಾಶ್ ನಾರಾಯಣ್ ಆಸ್ಪತ್ರೆಯಲ್ಲಿ ವಿಧಿವಶರಾಗಿದ್ದಾರೆ ಎಂಬ ಸುದ್ದಿ ತಿಳಿದು ದುಃಖವಾಯಿತು.

ಇವರು ಗದಗ ಜಿಲ್ಲೆಯ ರೋಣ ತಾಲೂಕಿನನವರು. ದೆಹಲಿಯಲ್ಲಿ ಪ್ರಾರಂಭದಲ್ಲಿ ಕಾನ್ಸ್ಟೇಬಲ್ ಆಗಿ ಸೇವೆ ಸಲ್ಲಿಸಿ ಅನೇಕ ಜನೋಪಯೋಗಿ ಕೆಲಸಗಳು ಮಾಡಿದ ಹೆಗ್ಗಳಿಕೆ ಇವರದಾಗಿತ್ತು. ಕರ್ನಾಟಕ ಸಂಘ ಹಾಗೂ ಬಸವ ಇಂಟರ್‌ನ್ಯಾಷನಲ್ ಸೆಂಟರ್ ಹಾಗು ದೆಹಲಿ ಪೊಲೀಸ್ ಕ್ಲಬ್ಬಿನ ಆಜೀವ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಇವರ ಸತತ ಪ್ರಯತ್ನದ ಫಲವಾಗಿ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ನೇಮಕಾತಿಯಾಗಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಇವರಿಗೆ ಮೂರು ಜನ ಹೆಣ್ಣು ಮಕ್ಕಳು, ಒಂದು ಗಂಡು ಮಗು. ಎಲ್ಲರ ಮದುವೆಯನ್ನು ಬಹು ಅದ್ದೂರಿಯಾಗಿ ಏರ್ಪಡಿಸಲಾಗಿತ್ತು. ತಮ್ಮ ನಿವೃತ್ತಿಯ ನಂತರ ಕರ್ನಾಟಕ ಇಲ್ಲವೆ ದೆಹಲಿಯಲ್ಲಿ ಮಕ್ಕಳ ಮೊಮ್ಮಕ್ಕಳ ಜೊತೆ ಅತಿ ಪ್ರೀತಿಯಿಂದ ಜೀವನ ಕಳೆಯುತ್ತಿದ್ದರು. ದೆಹಲಿ ಕನ್ನಡಿಗರ ಅನೇಕ ಸಂಘ-ಸಂಸ್ಥೆಗಳ ಕಲಾ ನೃತ್ಯ ಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಆನಂದಪಡುತ್ತಿದ್ದರು. ಕೆಲವೊಮ್ಮೆ ತಮ್ಮ ಜನ್ಮ ಭೂಮಿಗೆ ಹೋಗಿ ಅಲ್ಲಿನ ಗೆಳೆಯರ ಜೊತೆಗೆ ಕೂಡಿ ಹಿಂದಿನ ಘಟನೆಗಳನ್ನು ಮೆಲುಕು ಹಾಕುತ್ತಾ ಸಂತೋಷ ಜೀವನ ಕಳೆಯುತ್ತಿದ್ದರು. ದೆಹಲಿಗೆ ಬಂದ ದಿನವೇ ದೂರವಾಣಿ ಮೂಲಕ ಸಂಪರ್ಕಿಸಿ 'ಬಿರಾದಾರ ಅವರೆ ಚೆನ್ನಾಗಿ ಇದ್ದಿರಾ' ಎಂದು ಹಾರೈಸುತಿದ್ದರು. ಒಟ್ಟಿನಲ್ಲಿ ಇವರು ಸಾಮಾಜಿಕ ಚಿಂತಕರಾಗಿ, ಸಂಸ್ಥೆಗಳ ಬೆನ್ನೆಲುಬು ಆಗಿ, ಮಾರ್ಗದರ್ಶಕರಾಗಿ ಭಾವಿ ಪೀಳಿಗೆಯ ಪರಿಚಯಿಸುವ ವ್ಯಕ್ತಿಯಾಗಿದ್ದರು. "ತಾ ಒಂದು ಬಗೆದರೆ ದೈವವಂದು ಬಗೆದಂತೆ" ವಿಧಿಯ ಮುಂದೆ ಯಾರು ಏನು ಮಾಡಲಿಕ್ಕಾಗದು.

ತನ್ನ ಚಿಕ್ಕ ಮಗಳಾದ ಭುವನೇಶ್ವರಿಯವರು ಅನಾರೋಗ್ಯರಿಂದ ಬಳಲುತ್ತಿದ್ದ ಸಮಾಚಾರ ಕೇಳಿ ತಮ್ಮ ಸಹ ಕುಟುಂಬ ದೆಹಲಿಗೆ ಆಗಮಿಸಿದರು. ಆದರೆ ಅವಳನ್ನು ಕಿಡ್ನಿ ದೌರ್ಬಲ್ಯದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟರು. ಮಗಳ ಚಿಂತೆಯಲ್ಲಿ ದಿಕ್ಕು ತೋಚದೆ ಚಿಂತಾಕ್ರಾಂತರಾಗಿ ಎಲ್ಲರು ದುಃಖದ ಮಡುವಿನಲ್ಲಿ ಬಿದ್ದರು. ಜ್ವರದ ನೆಪದಿಂದ ಇವರಿಗೂ ಕೂಡಾ ಕೊರೊನಾ ಎಂಬ ಸಾಂಕ್ರಾಮಿಕ ರೋಗ ತಗುಲಿ ಲೋಕನಾಯಕ ಜಯಪ್ರಕಾಶ್ ನಾರಾಯಣ್ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಮಗಳು ತೀರಿಕೊಂಡ ಒಂದು ವಾರದ ಒಳಗೆ ಇವರಿಗೂ ಕೂಡಾ ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ 31-07-21 ರಂದು ಮುಂಜಾನೆ ಮೃತಪಟ್ಟಿದ್ದಾರೆ.

ಇವರ ಪಾರ್ಥಿವ ಶರೀರ ಲಿಂಗಾಯತ ವಿಧಿ ವಿಧಾನಗಳ ಪ್ರಕಾರ, ಬಸವ ಇಂಟರ್‌ನ್ಯಾಷನಲ್ ಸೆಂಟರ ನವದೆಹಲಿಯ ದ್ವಾರಕಾ ಸೆಕ್ಟರ್ 24 ರಲ್ಲಿ ನೆರವೇರಿತು. ಇವರು ತನ್ನ ಪತ್ನಿ, ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಪುತ್ರ ಹಾಗು ಅಪಾರ ಬಂಧು ಬಳಗವನ್ನು ಬಿಟ್ಟು ಅಗಲಿದ್ದಾರೆ ಇವರ ಆತ್ಮಕ್ಕೆ ಶಾಂತಿ ಸಿಗಲಿ ಹಾಗು ಕುಟುಂಬದ ಎಲ್ಲ ಸದಸ್ಯರಿಗೆ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲೆಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸುತ್ತೇನೆ.

***ವೈಜಿನಾಥ ಬಿರಾದಾರ***

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ಹೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
Aug-2021, Vol. No.31, Issue No. 11, Price Rs.1/-
RNI Regn. No. 53405/91, DL-SW-1/4016/19-21
Date of Publication : Aug 8th / 9th, Posting Date : 10th / 11th, Total Pages-16, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

